<?xml version="1.0" ?>
<?xml-stylesheet type="text/css" href="home.css"?>

<Doc id="kan-w-media- KA00007 " lang="Kannada">
<Header type="text">
<encodingDesc>
<projectDesc> CIIL-Kannada Corpora, Monolingual Written Text </projectDesc>
<samplingDesc> Simple written text only has been transcribed. Diagrams, pictures, tables and verses have been omitted. Samples taken from page 29-30, 60-61, 90-91, 120-121, 150-151, 188-189, 176-177, 178-179, 210- 211, 226-227, 238-239, 260-261, 262-263, 286-287, 288-289 </samplingDesc>
</encodingDesc>
<sourceDesc>
<biblStruct>
<source> SRLC
<category> Aesthetics </category>
<subcategory> Literature-Novels </subcategory>
<text> Book </text>
<title> sArtha </title>
<vol> </vol>
<issue> </issue>
</source>
<textDes>
<type> </type>
<headline> sArtha </headline>
<author> es.el. bhairappa</author>
<words> 3591 </words>
</textDes>
<imprint>
<pubPlace> Bangalore-India </pubPlace>
<publisher> sAhitya bhaMDAra prakAshana </publisher>
<pubDate> 2000 </pubDate>
</imprint>
<idno type="CIIL code"> S55563 </idno>
<index> KA00007 </index>

</biblStruct>
</sourceDesc>
<profileDesc>
<creation>
<date> 28-Aug-2006 </date>
<inputter> R.Sevanthi </inputter>
<proof> Vijayalaxmi Patil </proof>
</creation>
<langUsage> Kannada </langUsage>
<wsdUsage>
<writingSystem id="ISO/IEC 10646">Universal Multiple-Octet Coded Character Set (UCS).
</writingSystem>
</wsdUsage>
<textClass>
<channel mode="w"> print </channel>
<domain type="public">  </domain>
</textClass>
</profileDesc>
</Header>
<text><body>

<p> ದಾರಿಯ ಬೇರೆ ಬೇರೆ ರಾಜ್ಯಗಳ ಮುಖ್ಯ ಊರುಗಳಲ್ಲಿ ವ್ಯಾಪಾರವಾದಷ್ಟು ಸರಕುಗಳನ್ನು ಇಳಿಸಿ ತನ್ನ ಮುಂದಿನ ಪ್ರಯಾಣದಲ್ಲಿ ವ್ಯಾಪಾರವಾಗುವ, ಹಾಗೂ ಅಗ್ಗದಲ್ಲಿ ದೊರೆಯುವ ಪದಾರ್ಥಗಳನ್ನು ಕೊಂಡು ನಮ್ಮ ಸಾರ್ಥವು ಮಥುರೆಯನ್ನು ತಲುಪುವ ಹೊತ್ತಿಗೆ ಐದು ಪಕ್ಷಗಳಾಗಿದ್ದವು. ನಾನು ನನ್ನೂರು ತಾರಾವತಿಯನ್ನು ಬಿಟ್ಟದ್ದು ಆಶ್ವಯುಜ ಶುಕ್ಲ ತದಿಗೆಯಂದು. ಈ ದಿನ ಮಾರ್ಗಶಿರ ಬಹುಳ ಚೌತಿ. ನೇರವಾಗಿ ಕುದುರೆಯ ಮೇಲೆ ಬಂದಿದ್ದರೆ, ಅಥವಾ ದಿನಕ್ಕಿಷ್ಟು ಎಂದು ಬೆಳಗಿನಿಂದ ಸಂಜೆಯವರೆಗೆ ನಡೆದಿದ್ದರೆ ಇದರ ಅರ್ಧದಷ್ಟು ಕಾಲವು ಬೇಕಾಗುತ್ತಿರಲಿಲ್ಲ. ಆದರೆ ಹಾಗೆ ಒಂಟಿಯಾಗಿ ಅಥವಾ ಸಣ್ಣ ಗುಂಪಿನಲ್ಲಿ ಪಯಣಿಸುವ ರಕ್ಷಣೆ ಆ ಪ್ರದೇಶದಲ್ಲಿ ಇರಲಿಲ್ಲ. ರಾಜ ಕಾರ್ಯವನ್ನು ಹೊತ್ತ ಭಟರುಗಳಾದರೆ ಶಸ್ತ್ರಸನ್ನದ್ಧರಾಗಿ, ಸಣ್ಣ ಗುಂಪಿನಲ್ಲಿ ವೇಗವಾಗಿ ಕುದುರೆಯ ಮೇಲೆ ಸಾಗುತ್ತಿದ್ದರು. ನಮ್ಮಂಥ ಸಾರ್ಥಗಳೋ ಎಷ್ಟೋ ಕಡೆ ಗಿಡಗುಚ್ಚಿಗಳನ್ನು ಕಡಿದು ದಾರಿ ಮಾಡಿಕೊಂಡು ಗುದ್ದಲಿಯಿಂದ ಹಳ್ಳ ಕೊಳ್ಳಗಳನ್ನು ಮುಚ್ಚಿ ಗಾಡಿ ಹರಿಯುವಂತೆ ಮಟ್ಟ ಮಾಡಿಕೊಂಡು ಸಾಗಬೇಕಿತ್ತು. ಮಳೆಗಾಲ ಕಳೆದಿದ್ದುರಿಂದ ಮಹಾಪಥಗಳು ಕೂಡ ಕೊಚ್ಚಿಹೋಗಿದ್ದವು. ಸಾಧಾರಣ ಪಥಗಳ ಪಾಡು ಹೇಳತೀರದು. </p>

<p> ನಮ್ಮ ಸಾರ್ಥವು ಮಥುರೆಯಿಂದ ಗಾಂಧಾರದ ಪುಷ್ಕಲಾವತಿಯವರೆಗೆ ಹೋಗುವುದಿತ್ತು. ಪೂರ್ತಿ ಅದರ ಸಂಗಡವೇ ಹೋಗುವುದು ನನ್ನ ಉದ್ದೇಶಪೂರ್ತಿಗೆ ಹೆಚ್ಚು ಅನುಕೂಲವಾಗುತ್ತಿತ್ತು. ಆದರೆ ಕಾಶಿಯಲ್ಲಿ ಉನ್ನತ ಅಧ್ಯಯನಕ್ಕೆಂಬ ಸೋಗಿನಲ್ಲಿ ನಾನು ಈ ಸಾರ್ಥವನ್ನು ಸೇರಿಕೊಂಡಿದ್ದೆ. ಅಮರುಕನು ಸೇರಿಸಿದ್ದ. ಈಗ, ನಾನು ಕಾಶಿಗೆ ಹೋಗುವುದಿಲ್ಲ ನಿಮ್ಮೊಡನೆ ಬರುತ್ತೇನೆ ಎಂದರೆ ಇವರಾದರೂ ಹೇಗೆ ನಂಬುತ್ತಾರೆ? ಮಥುರೆಯಲ್ಲಿ ನನ್ನನ್ನು ನಿಲ್ಲಿಸಿ ತಮ್ಮ ವಾಣಿಜ್ಯ ವ್ಯವಹಾರಗಳನ್ನು ಮುಗಿಸಿ ಅವರು ಮುಂದೆ ಪ್ರಯಾಣ ಮಾಡಿದರು. ಮಥುರೆ ಎಂದರೆ ಮಹಾಪಥಗಳು ಸಂಧಿಸುವ ದೊಡ್ಡ ವಾಣಿಜ್ಯ ಕೇಂದ್ರ. ಇತ್ತ ಸಿಂಧು, ಅತ್ತ ಗಾಂಧಾರದ ಕಡೆಗಳಿಂದ ಬರುವ

ಸಾರ್ಥಗಳು ಮಥುರೆಯ ಮಾರ್ಗವಾಗಿಯೇ ಕೋಶಾಂಬಿ ಕಾಶಿ ಪಾಟಲಿಪುತ್ರ ರಾಜಗೃಹಗಳನ್ನು ಸಂಧಿಸಿ ಸಾಗರ ವ್ಯಾಪಾರದ ತಾಮ್ರಲಿಪ್ತಿಯನ್ನು ಮುಟ್ಟುವುದು. ಇತ್ತ ದಕ್ಷಿಣಕ್ಕೂ ಕವಲೊಡೆಯುವುದು. ಒಟ್ಟಿಗೆ ಹದಿನೈದಿಪ್ಪತ್ತು ಸಾರ್ಥಗಳು ಬಂದರೂ ಬೀಡು ಬಿಡಲು ಅನುಕೂಲವಾದ ಬೇರೆ ಬೇರೆ ಮೈದಾನಗಳು. ನೀರಿನವ್ಯವಸ್ಥೆ. ತೋಪಿನ ನೆರಳು. ಎಷ್ಟೋ ಸಾರ್ಥಗಳು ಇಲ್ಲಿಯೇ ಸರಕುಗಳ ವಿನಿಮಯಮಾಡಿಕೊಂಡು ಹಿಂತಿರುಗುತ್ತಿದ್ದವು. ಇಂಥ ವಿನಿಮಯ ವ್ಯಪಾರಕ್ಕೆ ಕೂಡ ರಾಜ್ಯಕ್ಕೆ ಕರ ಸಲ್ಲಿಸಬೇಕಿತ್ತು. ರಾಜ್ಯಾಧಿಕಾರಿಗಳ ಸಮ್ಮುಖದಲ್ಲಿ ವ್ಯಾಪಾರ ನಡೆಯಬೇಕಿತ್ತು. ಮಾಡಿದ ವ್ಯಾಪಾರದ ಲೆಕ್ಕವನ್ನೂ ಅಧಿಕಾರಿಗಳು ಪರಿಶೀಲಿಸುತ್ತಿದ್ದರು. ಅದಕ್ಕೆಂದೇ ಸುತ್ತ ಪೌಳಿಹಾಕಿದ ಒಂದು ದೊಡ್ಡ ವ್ಯಾಪಾರದ ಬಯಲನ್ನು ನಿರ್ಮಿಸಿದ್ದರು. ಅದರ ದ್ವಾರದಲ್ಲಿ ಮತ್ತು ಸುತ್ತ ಶಸ್ತ್ರಸನ್ನದ್ಧರಾದ ರಕ್ಷಕ ಭಟರು ಸದಾ ನಿಂತಿರುತ್ತಿದ್ದರು. </p>

<p> ಸಾರ್ಥವನ್ನು ಬೀಡು ಬಿಡಿಸಿದ ಮೇಲೆ ಬುಧಶ್ರೇಷ್ಠಿ ಆದಿತ್ಯಶ್ರೇಷ್ಠಿಗಳಿಬ್ಬರೂ ಒಂದು ದಿಬ್ಬದ ಮೇಲೆ ಕಲ್ಲಿನಲ್ಲಿ ನಿರ್ಮಿಸಿದ್ದ ಮಣಿಭದ್ರ ಯಕ್ಷನ ದೇವಾಲಯಕ್ಕೆ ಹೋದರು. ಜೊತೆಯಲ್ಲಿ ನಾನೂ ಇದ್ದೆ. ಒಳಗೆ ಸುಮಾರು ಆರು ಮೊಳ ಎತ್ತರದ ವಿಗ್ರಹ. ಒಬ್ಬ ಶ್ರಮಣ ಅರ್ಚಕ. ಇವರು ತಂದಿದ್ದ ಸುಗಂಧ ದ್ರವ್ಯಗಳನ್ನು ಇಸಕೊಂಡು ಅವನು ಪೂಜೆ ಮಾಡಿದ. ಇವರು ಭಕ್ತಿಯಿಂದ ಕೈಮುಗಿದು ನಮಸ್ಕರಿಸಿ ಆಶೀರ್ವಾದ ಪಡೆದರು. ಕೈಮುಗಿದೆನಾದರೂ ನನಗೆ ಭಕ್ತಿ ಹುಟ್ಟಲಿಲ್ಲ. ಅವರಿಬ್ಬರೂ ಹೊತ್ತು ತಂದಿದ್ದ ಸುಮಾರು ಒಂದು ನೂರು ಸುವರ್ಣ ನಾಣ್ಯಗಳನ್ನು ಗೋಲಕಕ್ಕೆ ಹಾಕಿದರು. </p>

<p> ಸಂಚಾರ ಕಾಲದಲ್ಲಿ ನನ್ನನ್ನು ಕಾಮವು ಅತಿಯಾಗಿ ಕಾಡತೊಡಗಿತು. ಅದಕ್ಕಿಂತ ಮೊದಲು ಅದರ ಬಾಧೆ ಇರಲಿಲ್ಲವೆಂದಲ್ಲ. ಆಗ ಜೀವನದ ಇತರ ಚಿಂತೆಗಳಿದ್ದವು. ಸಾರ್ಥದ ಜೊತೆ ಸಂಚರಿಸುವಾಗ ಪ್ರಯಾಣದ ಹೊಸ ಅನುಭವವು ಮನಸ್ಸನ್ನು ಸೆಳೆದುಕೊಂಡಿತ್ತು. ವಾಣಿಜ್ಯದ ಮರ್ಮಗಳನ್ನು ಅರಿಯುವ ಹೊಣೆ ಇತ್ತು. ಮಥುರೆಯನ್ನು ತಲುಪಿದ ಮೇಲೆ ವಜ್ರಪಾದರ ವಿಹಾರ ಮತ್ತು ಅದರ ಧ್ಯೇಯಗಳನ್ನರಿಯುವ ಕುತೂಹಲವಿತ್ತು. ಜೊತೆಯಲ್ಲಿಯೇ ಶಿಲ್ಪಿ ವಿಶ್ವಕರ್ಮನ ಕೆಲಸದ ಗುರಿಗಳನ್ನು ತಿಳಿಯುವ ಹಂಬಲ. ನಾಟಕದ ಅಭ್ಯಾಸಕ್ಕೆ ತೊಡಗಿದಮೇಲಂತೂ ಹಗಲು ರಾತ್ರಿ ಅದೇ ಮಗ್ನತೆ, ಆತಂಕ. ಈಗ ನಾಟಕವೆನ್ನುವುದು ನೀರಿನಲ್ಲಿರುವ ಮೀನಿಗೆ ಈಜುವಷ್ಟು ಸುಲಲಿತವಾಗಿ ಯಾವ ಆತಂಕವೂ ಇರಲಿಲ್ಲ. ಮನಸ್ಸು ಉಲ್ಲಾಸದಿಂದಿತ್ತು. ಇಂಥ ಸ್ಥಿತಿಯಲ್ಲಿ, ಈ ಪ್ರಾಯದಲ್ಲಿ ಕಾಮಬಾಧೆ ಒಳಗಿನಿಂದ ಕೊರೆದು ಬಿರುಕು ಬೀಳಿಸುತ್ತಿತ್ತು. ನಾನು ಊರು ಬಿಟ್ಟು ಎರಡು ವರ್ಷ ಆಗಿತ್ತು. ಹೆಂಡತಿ ಹೆಚ್ಚು ಕಡಿಮೆ ಮರೆತು ಹೋಗಿದ್ದಳು. ಮನಸ್ಸು ಚಂದ್ರಿಕೆಯನ್ನೇ ನೆನಸುತ್ತಿತ್ತು. ಬರೀ ಕಾಮದ ತೃಪ್ತಿಯಲ್ಲ, ಸೌಂದರ್ಯದ, ಭಾವದ, ಭಾವನೆಯ ಸಮಗ್ರ ತೃಪ್ತಿಯನ್ನು ಬಯಸುತ್ತಿತ್ತು. ನಮ್ಮ ತಂಡದಲ್ಲಿ ಒಟ್ಟು ಹತ್ತು ಜನ ನಟಿಯರಿದ್ದರು. ಆರಂಭದಲ್ಲಿ ದೇವಕಿ, ಕಂಸನ ಹೆಂಡತಿಯರಾದ ಅಸ್ತಿ ಪ್ರಾಪ್ತಿಯರು, ಗೋಪಿಯರು ಮೊದಲಾದ ಪಾತ್ರಗಳನ್ನು ಮಾಡಿ ಅನಂತರ ಅವರೇ ಕೃಷ್ಣನ ಇತರ ಏಳು ಜನ ಹೆಂಡಂದಿರ ಮತ್ತು ದ್ರೌಪದಿಯ ಪಾತ್ರ ವಹಿಸುತ್ತಿದ್ದರು. ಆರಂಭದಲ್ಲಿ ವಿರಹಿಣಿಯಾಗಿ ಅನಂತರ ರುಕ್ಮಿಣಿಯಾಗುವ ಚಂದ್ರಿಕೆಯಂತೂ ಮುಖ್ಯನಟಿ. ನಟಿಯರಲ್ಲೆಲ್ಲ ಮುಖ್ಯ ಆಕರ್ಷಣೆ. ಉಳಿದ ನಟಿಯರಲ್ಲಿ ನಾನು ಯಾರಿಗೆ ಬೇಕಾದರೂ ಇಂಗಿತ ವ್ಯಕ್ತಪಡಿಸಿ ಬೀಡಾರಕ್ಕೆ ಕರೆಸಿಕೊಳ್ಳಬಹುದಿತ್ತು. ಹಾವ ಭಾವ ರೂಪ ಮೈಕಟ್ಟುಗಳಲ್ಲಿ ಅವರೇನೂ ಕಡಿಮೆಯವರಲ್ಲ. ಕಡಿಮೆ ಇದ್ದರೆ ನಟಿಯರಾಗುತ್ತಿರಲಿಲ್ಲ. ಕಲಾವಂತೆಯರಾದುದರಿಂದ ಗೃಹಸ್ಥಾಶ್ರಮದ ನೀತಿ ಕಟ್ಟುಗಳಿಂದ ಮುಕ್ತರಾಗಿದ್ದರು. ಧೃತಿ, ಛಾಯಾ, ಇಬ್ಬರು ಮಾತ್ರ ನಮ್ಮದೇ ಮಂಡಲಿಯ ವೈವಸ್ವತ ಮತ್ತು ಕಣ್ವರಲ್ಲಿ ಅನುರಕ್ತೆಯರಾಗಿದ್ದರು. ಉಳಿದ ಏಳು ಜನರು ಮುಕ್ತಜೀವನ ನಡೆಸುತ್ತಿದ್ದರು. ನಾನು ಇಡೀ ನಾಟಕದ ಕೇಂದ್ರ ಪಾತ್ರ, ಕೇಂದ್ರ ಪುರುಷನಾಗಿದ್ದೆ. ಯಾರೊಡನೆ ಇಂಗಿತವನ್ನು ವ್ಯಕ್ತಪಡಿಸಿದ್ದರೂ ಸ್ವೀಕರಿಸುತ್ತಿದ್ದರು. ಕಾಂತಿಮತಿ, ಚಿತ್ರಾ, ಮತ್ತು ಮನೋರಮೆಯರು ಅನುಗ್ರಹವೆಂದು ಭಾವಿಸುತ್ತಾರೆಂದು ನನಗೆ ಗೊತ್ತಿತ್ತು. ನನ್ನೊಡನೆ ಮಾತನಾಡುವಾಗ, ನಾನು ಏನು ಹೇಳಿದರೂ ಅದನ್ನು ಮಾಡುವಾಗ ಅವರು ತೋರಿಸುತ್ತಿದ್ದ ಹಾವ ಭಾವ, ಎರಡರ್ಥದ ಮಾತುಗಳು ಸ್ಪಷ್ಟ ಸಂಕೇತಗಳಾಗಿದ್ದವು. ಆದರೂ ನನ್ನ ಮನಸ್ಸು ಚಂದ್ರಿಕೆಯಿಂದ ತುಳುಕಿ ಹರಿಯುತ್ತಿರಲಿಲ್ಲ. ಬೇರೆ ಯಾರೊಡನೆ ಮಿಳಿತವಾದರೂ ಅವಳಿಗೆ ತಿಳಿಯುತ್ತದೆ; ಅವಳಿಗೆ ಮಾತ್ರವಲ್ಲ, ಮಂಡಳಿಯ ಎಲ್ಲರಿಗೂ ತಿಳಿಯುತ್ತದೆ. ಒಳ ಒಳಗೆ ಕುಹಕ ಕುಚೋದ್ಯದ ಮಾತನಾಡಿಕೊಂಡರೂ ಯಾರೂ ಯಾರನ್ನೂ ಆಕ್ಷೇಪಿಸುವುದಿಲ್ಲ. ಇದು ಮುಕ್ತಜೀವನದ ವೃತ್ತಿ. ನನ್ನ ವಿಷಯದಲ್ಲಿ ಹಾಸ್ಯ

ಮಾಡುವ ಧೈರ್ಯ ಕೂಡ ಯಾರಿಗೂ ಇಲ್ಲ. ಆದರೂ ನಾನೇಕೆ ಚಂದ್ರಿಕೆಗೆ ಅಂಜುತ್ತೇನೆ? ಎಂದು ನನ್ನನ್ನು ನಾನು ಬಗೆದುಕೊಂಡಿದ್ದೇನೆ. ನೀನೂ ಇಂಥ ನಡವಳಿಕೆಗೆ ಬಿದ್ದು ಅಗ್ಗವಾಗುತ್ತೀಯಾ ಎಂದು ಕೇಳಿಬಿಟ್ಟರೆ? ಎಂಬ ಅಂಜಿಕೆ ಎಂದು ಅರ್ಥವಾಯಿತು. </p>

<p> 'ಇದೇ ಅಶ್ವತ್ಥದ ಸಮೀಪ. ಜನ್ಮಸ್ಥಾನ ಮಂದಿರದ ಸುತ್ತಮುತ್ತ, ತೋಪಿನಲ್ಲೆಲ್ಲ, ಸಾರ್ಥಮಾಳದ ಪ್ರದೇಶ ಪೂರ್ತಿ.' </p>

<p> 'ನಿಮಗೆ ಗೊತ್ತಿತ್ತು ನಾನು ಹುಡುಕುತ್ತಿದೀನಿ ಅಂತ. ಆದರೂ ಯಾಕೆ ಬಚ್ಚಿಟ್ಟುಕೊಂಡಿದ್ದಿರಿ?' ನಾನು ಸಲಿಗೆಯಿಂದ ಕೇಳಿದೆ, ಆಪಾದಿಸುವ ಧ್ವನಿಯನ್ನೂ ಬೆರೆಸಿ. </p>

<p> 'ಸ್ವಲ್ಪವೂ ಕಷ್ಟಪಡದೆ ಸುಲಭವಾಗಿ ಸಿಕ್ಕುವ ವಸ್ತುವಿನ ಬೆಲೆ ತಿಳಿಯುವುದು ಹೇಗೆ?' </p>

<p> ನನ್ನ ಅಸಮಾಧಾನ, ಅದರ ಮೂಲವಾದ ಅಹಂಕಾರಗಳು ಕೆಳಗಿಳಿದವು. </p>

<p> 'ನನ್ನನ್ನು ಕ್ಷಮಿಸಿ. ಧ್ಯಾನವನ್ನು ಹೇಳಿಕೊಡಿ.' ಎಂದು ಬಾಗಿ ಅವರ ಪಾದಗಳನ್ನು ಮುಟ್ಟಿ ಕೇಳಿದೆ. </p>

<p> 'ನಿಮಗಾಗಲೆ ಗ್ರಂಥ ಪರಿಚಯವಿದೆ. ಆದರೆ ಗುರುವಿನ ಸನ್ನಿಧಿಯ ಮಾರ್ಗದರ್ಶನದಲ್ಲಿ ಒಂದೊಂದೇ ಹೆಜ್ಜೆ ಸಾಧಿಸುವುದು ಮುಖ್ಯ. ತನಗೇನಾಗುತ್ತಿದೆ ಎಂಬುದನ್ನೂ ಹೇಳುತ್ತಿರಬೇಕು. ಎಷ್ಟೋ ವೇಳೆ ಸಾಧಕನು ಹೇಳದೆಯೇ ಗುರುವಿಗೆ ಅರ್ಥವಾಗುತ್ತದೆ. ನಾನು ಇದೇ ಕ್ಷೇತ್ರದಲ್ಲಿ ಹೆಚ್ಚು ದಿವಸ ನಿಲ್ಲುವವನಲ್ಲ. ನನ್ನ ಹಿಂದೆ ಹಿಂದೆ ಅಲೆಯುವುದು ಸಾಧಕರಾದ ನಿಮಗೆ ಅನುಕೂಲಕರವಲ್ಲ. ಒಂದು ಸ್ಥಾನದಲ್ಲಿ ನೆಲೆ ನಿಂತು ಸದಾ ಸಾಧನೆಯಲ್ಲಿ ತೊಡಗಬೇಕು.' </p>

<p> 'ನೀವೇ ದಾರಿ ತೋರಿಸುತ್ತೀರೆಂದು ನನಗೆ ಅಂತಃಪ್ರೇರಣೆಯಾಗುತ್ತಿದೆ. ಅದರಿಂದಲೇ ನೆನ್ನೆ ಎಲ್ಲ ನಿಮ್ಮನ್ನು ಹುಡುಕಿಕೊಂಡು ಅಲೆದೆ.' </p>

<p> 'ಆಯಿತು. ನಿಮಗಾಗಿ ನಾನು ಈ ಕ್ಷೇತ್ರದಲ್ಲಿ ಒಂದು ಮಾಸ ಉಳಿಯುತ್ತೇನೆ. ಇಲ್ಲಿಂದ ಕುರುಕ್ಷೇತ್ರಕ್ಕೆ ಎರಡು ತಿಂಗಳು ಹೋಗಿ ಹಿಂತಿರುಗುವಾಗ ಇಲ್ಲಿ ಮತ್ತೆ ನಾಲ್ಕು ದಿನವಿದ್ದು ನಿಮ್ಮ ಪ್ರಗತಿಯನ್ನು ನೋಡಿ ಅನಂತರ ದಕ್ಷಿಣ ದೇಶಕ್ಕೆ ಪ್ರಯಾಣ ಮಾಡುತ್ತೇನೆ. ಸಾಧನೆ ಹಾಗೂ ದೈವಕೃಪೆ ಇದ್ದಷ್ಟು ನೀವು ಮುಂದುವರಿಯುತ್ತೀರಿ. ಅನಂತರದಲ್ಲಿ ನಿಮ್ಮ ನಿಷ್ಠೆ ಅನುಷ್ಠಾನಗಳು ಚೊಕ್ಕವಾಗಿದ್ದರೆ ನಾನೇ ಅಂತಃಪ್ರೇರಣೆಯ ಮೂಲಕ ಮಾರ್ಗದರ್ಶನ ಮಾಡುತ್ತೇನೆ.' ಎಂದರು. </p>

<p> 'ಧನ್ಯೋಸ್ಮಿ.' ಎಂದು ನಾನು ಮತ್ತೆ ನಮಸ್ಕರಿಸಿದೆ. </p>

<p> ಅನಂತರ ನನಗಾಗಿ ಮಥುರೆಯಲ್ಲಿ ಉಳಿದ ಒಂದು ತಿಂಗಳಿನ ಕಾಲದಲ್ಲಿ ಅವರು ಒಂದು ದಿನವೂ ನನ್ನ ಮನೆಯಲ್ಲಿ ಊಟ ಮಾಡಲಿಲ್ಲ. ನನ್ನೊಡನೆ ಉಳಿಯಲಿಲ್ಲ. ಒಂದು ಕಡೆ ಉಳಿಯುವುದು ಒಂದೇ ಮನೆಯಲ್ಲಿ ಉಣ್ಣುವುದು ಸನ್ಯಾಸ ನಿಯಮಕ್ಕೆ ವಿರೋಧವೆಂಬ ಅವರ ಮಾತು ನನಗೂ ಗೊತ್ತಿದ್ದುದೇ. ಎರಡೂವರೆ ತಿಂಗಳಿನ ನಂತರ ಕುರುಕ್ಷೇತ್ರದಿಂದ ಹಿಂತಿರುಗಿ ಇಲ್ಲಿ ಉಳಿದ ಒಂದು ಪಕ್ಷಪರ್ಯಂತವೂ ಮಧ್ಯಾಹ್ನ ತಮಗೆ ಬೇಕಾದ ಐದು ಹಿಡಿ ಅನ್ನ ದೊರಕುವ ತನಕ ಒಂದೋ ಎರಡೋ ಮೂರೋ ಮನೆಗಳಲ್ಲಿ ಭಿಕ್ಷೆ ಬೇಡುತ್ತಿದ್ದರು. ಎಷ್ಟೋ ದಿನ ತಾವೇ ನನ್ನ ಮನೆಗೆ ಬಂದು ಧ್ಯಾನದ ಸೂಕ್ಷ್ಮಗಳನ್ನು ಹೇಳಿಕೊಡುತ್ತಿದ್ದರು. ಇಲ್ಲವೇ ನಾನು ಅವರು ಸಾಧಾರಣವಾಗಿ ಇರುತ್ತಿದ್ದ ಈ ಅಶ್ವತ್ಥವೃಕ್ಷದ ಬದಿಗೆ ಬಂದು ಕಾಣುತ್ತಿದ್ದೆ. ಗುರುದಕ್ಷಿಣೆ ಇಲ್ಲ. ನನ್ನಿಂದ ಉಪಚಾರ ಮೊದಲಾಗಿ ಯಾವುದೇ ರೂಪದ ಸೇವೆಯೂ ಇಲ್ಲ. ಸಾಧನೆಯಲ್ಲಿ ನಿಜವಾದ ನಿಷ್ಠೆಯುಳ್ಳವರಿಗೆ ಮಾರ್ಗದರ್ಶನ ಮಾಡಿ, ತುಸು ಶಕ್ತಿದಾನವನ್ನೂ ಮಾಡಿ ಮುಂದೆ ನಡೆಸುವುದು ಅವರ ಸಾಧನೆಯ ಒಂದು ಭಾಗವಾಗಿರಬೇಕೆಂದು ಅವರಿಗೆ ಅವರ ಗುರುಗಳ ಆಣತಿಯಾಗಿದೆ ಎಂದು ಅವರೇ ಹೇಳಿದರು. </p>

<p> ಅವಳ ವಿಷಯದಲ್ಲಿ ನನ್ನ ಮನಸ್ಸು ಕೃತಜ್ಞತೆಯಿಂದ ತುಂಬಿ ಬಂದಿತ್ತು. ಬೇರೆ ಯಾವ ಮಾತೂ ಮನಸ್ಸಿನಲ್ಲಿ ಬರಲು ಸಾಧ್ಯವಿರಲಿಲ್ಲ. ಅದೇ ತುಂಬಿಕೊಂಡಿದ್ದ ನಾನು ಯೋನಿಪೂಜಾ ಮಹಾತ್ಮೆಯನ್ನು ಹೇಳಲು ಆರಂಭಿಸಿದೆ. </p>

<p> 'ಆ ಮಂತ್ರಗಳನ್ನೆಲ್ಲ ಹೇಳಿದೆಯಲ್ಲ. ನನಗೆ ಸಂಸ್ಕೃತ ಅರ್ಥವಾಗುತ್ತದೆ,' ಎಂದಳು. ಹೊಸತೇನೂ ನನಗೆ ಗೊತ್ತಿರಲಿಲ್ಲ. ಹೊಳೆಯಲೂ ಇಲ್ಲ. ಮೌನವಾಗಿ ನಡೆಯತೊಡಗಿದೆ. ಅವಳು ನನ್ನ ಹಿಂದೆ ಬರುತ್ತಿದ್ದುದು ಚರ್ಮದ ಪಾದರಕ್ಷೆಯ ಸಪ್ಪಳದಿಂದ ತಿಳಿಯುವ ಹೊತ್ತಿಗೆ ಬೆಳಕಾಗಿತ್ತು. ಅಲ್ಲಲ್ಲಿ ಜನಗಳು ಕಾಣುತ್ತಿದ್ದರು. ದಾರಿ ಅಗಲವಾಗಿ ಅವಳು ನನಗಿಂತ ತುಸು ಮುಂದೆ ನಡೆಯತೊಡಗಿದಳು. ತನ್ನ ಗುರುತು ಸಿಕ್ಕಬಾರದೆಂದು ಮೇಲು ಹೊದಿಕೆಯನ್ನು ತಲೆಯ ಮೇಲೆ ಮುಸುಕು ಹಾಕಿ ಕಾಹಿಲೆಯವರು ಶೀತವಾಗದಂತೆ ಮುಚ್ಚಿಕೊಳ್ಳುವ

ರೀತಿಯಲ್ಲಿ ಹೊದೆದುಕೊಂಡಳು. ನಗರವು ಹತ್ತಿರವಾಗುತ್ತಿರುವಾಗ, 'ನಿನ್ನನ್ನು ಪೂರ್ಣಿಮಾಘಟ್ಟದ ಬಳಿ ಬಿಡಲೆ? ಅಲ್ಲಿಂದ ನೀನು ಮತ್ತೆ ಮನೆಗೆ ನಡೆಯಬೇಕು,' ಎಂದೆ. </p>

<p> ಒಂದು ನಿಮಿಷದ ನಂತರ, ಅವಳು ನನ್ನ ಕಡೆಗೆ ತಿರುಗಿ ನಿಂತಳು.  ನಾನೂ ನಿಂತೆ. 'ಕೃಷ್ಣ, ನಿನ್ನ ಈಗಿನ ಹೆಸರೇನೋ ನನಗೆ ತಿಳಿಯದು. ಅದನ್ನು ನಾನು ಕೇಳಲೂ ಇಲ್ಲ. ನಿನ್ನ ಅಭಿಲಾಷೆಯನ್ನು ಪೂರೈಸಲು ನಾನು ಈ ರಾತ್ರಿ ಇಲ್ಲಿಗೆ ಬಂದೆ. ನನ್ನದೊಂದು ಮಾತು ನಡೆಸಿಕೊಡುತ್ತೀಯಾ?'  </p>

<p> ಕೃತಜ್ಞತೆಯಿಂದ ತುಂಬಿದ್ದ ನಾನು, 'ಏನು ಹೇಳು?' ಎಂದೆ. </p>

<p> 'ಆಗಲಿ ಅಂತ ಮಾತುಕೊಟ್ಟರೆ ಮಾತ್ರ ಹೇಳುತೀನಿ.'  </p>

<p> 'ಆಗಲಿ.' </p>

<p> 'ನೀನು ನನ್ನ ಜೊತೆ ನನ್ನ ಮನೆಗೆ ಬಾ. ಮುಂದಿನ ಅಮಾವಾಸ್ಯೆಯವರೆಗೆ ಹೊರಗೆಲ್ಲೂ ಹೋಗದೆ ನನ್ನ ಮನೆಯಲ್ಲೇ ಇರಬೇಕು. ನಾನು ಮಾಡಿ ಇಕ್ಕುವ ಊಟವನ್ನೇ ಉಣ್ಣಬೇಕು. ನಿನಗೊಂದು ಪ್ರತ್ಯೇಕ ಕೋಣೆಯನ್ನು ಕೊಡುತ್ತೇನೆ. ಬಾಗಿಲು ಮುಚ್ಚಿ ಕೂತು ನಿನ್ನ ತಂತ್ರಧ್ಯಾನ ಮಾಡಿಕೊ.' </p>

<p> 'ಕಾಡುಮೇಡುಗಳಲ್ಲಿರಬೇಕಾದ ನನಗೇಕೆ ಈ ಬಂಧನ?' </p>

<p> 'ಮಹಾ ಶಕ್ತಿಸಂಚಯ ಮಾಡಿರುವ ನೀನು ಒಂದು ಮಾಸಪರ್ಯಂತ ನನ್ನ ಜೊತೆಯಲ್ಲಿದ್ದರೆ ನನಗೆ ಎಂದೆಂದಿಗೂ ರಕ್ಷಣೆ ದೊರೆಯುತ್ತದೆ.' ದ್ವಾರಪಾಲರನ್ನವಲಂಬಿಸುವ ಅಗತ್ಯವಿರುವುದಿಲ್ಲ ಅಂತ.' </p>

<p> 'ನಿನಗೊಂದು ಮಂಡಲವನ್ನು ಹೇಳಿಕೊಡುತ್ತೇನೆ. ನೀನು ಯಾವ ಊರಿನಲ್ಲಿ ಯಾವ ಮನೆಯಲ್ಲಿ ಬೇಕಾದರೂ ಇರು. ಅದನ್ನು ಬರೆದು ಪೂಜಿಸಿದರೆ ಯಾರೂ ಅತಿಕ್ರಮಿಸಿ ಒಳಗೆ ಬರಲು ಸಾಧ್ಯವಿಲ್ಲ.' </p>

<p> 'ಅದನ್ನೂ ಹೇಳಿಕೊಡು. ಆದರೆ ಒಂದು ತಿಂಗಳು ನನ್ನ ಸಂಗಡ ಇರಬೇಕು.' </p>

<p> ನಾನು ಆಗಲಿ ಎಂದು ಒಪ್ಪಿಕೊಂಡೆ. ಅವಳು ಮುಂದೆ ಮುಂದೆ ನಡೆಯುತ್ತಿದ್ದಳು. ನಾನು ಅವಳಿಗೆ ಸಂಬಂಧವಿಲ್ಲದವನಂತೆ ಇಪ್ಪತ್ತು ಹೆಜ್ಜೆ ಹಿಂದೆ ನಡೆಯುತ್ತಾ ಅವಳ ಮನೆ ಸೇರಿಕೊಂಡೆ. </p>

<p> ಅವಳು ಮುಖ್ಯಪಾತ್ರಗಳನ್ನು ಮಾಡದೆ ನಾಟಕವು ಕಳೆಗುಂದಿತ್ತಂತೆ. ಸಭಿಕರು ಅಸ್ತವ್ಯಸ್ತರಾಗುತ್ತಿದ್ದಾರಂತೆ. ಚಂದ್ರಿಕೆಯ ಆರೋಗ್ಯ ಹೇಗಿದೆ, ಎಂದಿನಿಂದ ಅವಳು ಬಂದು ಪಾತ್ರವಹಿಸಬಹುದು ಎಂದು ವಿಚಾರಿಸುವುದು ಅವರು ಬಂದಿದ್ದ ಮುಖ್ಯ ಉದ್ದೇಶವಂತೆ. ಅವಳಿಗೆ ಬಳಲಿಕೆಯಾಗಿತ್ತು. 'ಇವತ್ತು ನೀರು ತುಂಬಿ ಹಾಕುವಷ್ಟು ಶಕ್ತಿ ಇಲ್ಲ. ಚಾರುಮತಿಯ ಕೈಲಿ ಹಾಕಿಸಿಕೊಬೇಕು,' ಎಂದಳು. </p>

<p> 'ನೀನು ಅದರ ಚಿಂತೆ ಮಾಡಬೇಡ. ಮುಂದೆ ಏನಾಯಿತು ಹೇಳು. ಅದನ್ನು ಕೇಳುವ ತನಕ ಬೇರೆ ಏನೂ ಸಾಧ್ಯವಿಲ್ಲ.' </p>

<p> ಮೊದಲು ಕುಳಿತಿದ್ದ ಜಾಗದಲ್ಲೇ ಗೋಡೆಯೊರಗಿ ಕೂತು ಹೇಳಿದಳು: 'ಇವನು ಕಿರುಚಿಕೊಳ್ಳುತ್ತಿದ್ದುದು ಆಳುಗಳಿಂದ ಹಬ್ಬಿ ಹರಡಿತ್ತು. ಅವನು ಪ್ರಸಿದ್ಧ ವ್ಯಕ್ತಿ. ಆತ್ಮ ಹತ್ಯೆಯ ಕಾರಣವೇನು ಅಂತ ವಿಚಾರಿಸಿದರು. ಹೆಂಡತಿಯ ವ್ಯಭಿಚಾರಕ್ಕೆ ಬೇಸತ್ತು ಮಾಡಿಕೊಂಡಿದ್ದಾರೆ ಅಂತ ನನ್ನ ಮೇಲೆ ಆಪಾದನೆ ಮಾಡಿದರು. ಯಾವ ಶ್ರೀಮಂತ ಸಾಮಂತ ರಾಜಬಂಧುಗಳಿಗೂ ಸಿಕ್ಕದೆ ನಿಭಾಯಿಸುತ್ತಿದ್ದೆನಲ್ಲ, ಇದೇ ಸಮಯವೆಂದು ಕೆಲವರು ನಿರಾಶೆಯ ಕೋಪ ತೀರಿಸಿಕೊಳ್ಳಲು ನ್ಯಾಯಾಲಯದ ಮನಸ್ಸು ಕೆಡಿಸಲು ಪ್ರಯತ್ನಿಸಿದರು. ಗಾಯಕಿ ಅಂದರೆ ವೇಶ್ಯೆಯಾಗಿರಬೇಕು. ವೇಶ್ಯೆಯಾಗಿದ್ದು ನಮ್ಮ ಕೋರಿಕೆಯನ್ನು ನಿರಾಕರಿಸಿ ಮಹಾಪತಿವ್ರತೆಯಂತೆ ಸೆಡವು ತೋರಿಸುವುದು ಅಪರಾಧ ಅನ್ನುವುದು ಅವರ ತರ್ಕ. ನನ್ನನ್ನು ಬಂಧಿಸಿ ಕಾರಾಗೃಹದಲ್ಲಿರಿಸಿ ವಿಚಾರಣೆಯನ್ನು ನಿಗದಿ ಪಡಿಸಿದರು. ಒಬ್ಬ ರಾಜಬಂಧುವಂತೂ ತನಗೆ ಒಪ್ಪಿ ನಡೆದರೆ ನಿರ್ದೋಷಿ ಎಂಬ ತೀರ್ಪು ಬರುವಂತೆ ಮಾಡುವುದಾಗಿ ಕಾರಾಗೃಹದೊಳಕ್ಕೇ ಸಂದೇಶ ಕಳಿಸಿದ. ನಾನೇನು ಮಾಡಬೇಕು? ನಾನು ವೇಶ್ಯೆಯೆ? ವೇಶ್ಯೆಯಾಗಲೆ? ನನ್ನನ್ನು ವೇಶ್ಯೆಯ ಕೂಪಕ್ಕೆ ತಳ್ಳಲೆಂದೇ ಆವನು ಆತ್ಮಹತ್ಯೆ ಮಾಡಿಕೊಂಡನೆ? ಎಂಬ ನೈತಿಕ ಸೆಡವು ಬೆಳೆಯಿತು. ಆ ಅಯೋಗ್ಯನ ಹೆಂಡತಿಗೆ ಇಂಥ ಸೂಚನೆ ಕೊಡು ಅಂತ ಹೇಳು ಹೋಗು, ಎಂದು ಸಂದೇಶವಾಹಕಳಿಗೆ ಹೇಳಿ ಕಳಿಸಿದೆ. ನನಗೆ ಎರಡು ವರ್ಷ ಕಾರಾಗೃಹ ಶಿಕ್ಷೆಯಾಯಿತು.' </p>

<p> ‘ನೀನು ಸ್ವಸಮರ್ಥನೆಯ ವಾದ ಮಾಡಲಿಲ್ಲವೆ?’ </p>

<p> ‘ಅವನು ಹುಚ್ಚನಂತೆ ಕಿರುಚಿಕೊಂಡಿರಬಹುದು. ನಾನು ವ್ಯಭಿಚಾರಿಣಿ ಅನ್ನುವುದಕ್ಕೆ ಪುರಾವೆ ಏನು? ಅಂತ ಕೇಳಿದೆ. ಆ ಹುಡುಗನನ್ನು ನೀನೇ ಗುಪ್ತವಾಗಿ ಕಳಿಸಿರಬಹುದು. ಅವನನ್ನು ಕರೆಸಿ ಇಲ್ಲವೆಂದು ಪ್ರಮಾಣ ಮಾಡಿಸುವ ಹೊಣೆ ನಿನ್ನದು ಎಂದರು. ನಾನೆಲ್ಲಿ ಕರೆಸಲಿ? ಅವನೆಲ್ಲಿಗೆ ಹೋದನೆಂದು ಹುಡುಕಿಸಲಿ? ನಾನು ವ್ಯಭಿಚಾರಿಣಿ ಎಂದು ಒಪ್ಪಿದರೂ ಅವನ ಆತ್ಮಹತ್ಯೆಯನ್ನು ನಾನು ಪ್ರಚೋದಿಸಿದೆ ಅಂತ ಹೇಗೆ ನಿಷ್ಕರ್ಷಿಸುತ್ತೀರಿ? ಎಂದದ್ದಕ್ಕೆ ಇಷ್ಟು ದಿವಸ ನೆಟ್ಟಗಿದ್ದವನು ಈಗ ಹೀಗೆ ಮಾಡಿಕೊಳ್ಳಲು ಬೇರಾವ ಕಾರಣವುಂಟು ನೀನೇ ಹೇಳು. ಹೆಂಡತಿಯಾದ ನಿನಗಿಂತ ಹೆಚ್ಚು ವಿವರ ಬೇರೆಯವರಿಗೆ ಗೊತ್ತಿರುವುದು ಸಾಧ್ಯವಿಲ್ಲ, ಎಂದರು’. </p>

<p> ಊಹೆ ಮಾಡಿ ಅನುಕೂಲಸ್ಥರೆಂದು ಕಾಣುವ ಒಂದು ಮನೆಯನ್ನು ಪ್ರವೇಶಿಸಿ ದಾನ ಕೇಳಿದ ಮೊದಲ ಮನೆಯವರೇ ಅಕ್ಕಿ ತುಪ್ಪ ಬೆಲ್ಲ ಎಳ್ಳು ದಕ್ಷಿಣೆಗೆ ಹತ್ತು ನಿಷ್ಕಗಳನ್ನು ಕೊಟ್ಟರು. ತುಪ್ಪದ ದೊನ್ನೆಯನ್ನುಳಿದು ಉಳಿದವನ್ನು ಹೊದೆದಿದ್ದ ಪಂಚೆಯ ತುದಿಗಳಿಗೆ ಕಟ್ಟಿಕೊಂಡು ದಾರಿ ಕೇಳಿ ಫಲ್ಗು ನದಿಯ ದಡಕ್ಕೆ ನಡೆದೆ. ನೀರಿನ ದಡದ ಒಂದು ದಂಡೆಯಮೇಲೆ ಗಂಟನ್ನಿಟ್ಟನಂತರ ಹಲವು ವರ್ಷಗಳ ಹಿಂದೆ ನಾನು ಶ್ರಾದ್ಧ ಮಂತ್ರಗಳನ್ನೆಲ್ಲ ಕಲಿತಿದ್ದರೂ ಈಗ ನಡು ನಡುವೆ ಮರೆತಿರಬಹುದು, ಅಲ್ಲದೆ ಕ್ಷೇತ್ರವಿಶಿಷ್ಟವಾದ ಮಂತ್ರಗಳೂ ಇರಬಹುದು. ಯಾರಾದರೊಬ್ಬ ಸ್ಥಳಪುರೋಹಿತರಿಗೆ ನನ್ನಲ್ಲಿರುವುದನ್ನೆಲ್ಲ ಒಪ್ಪಿಸಿ ಕೃತಾರ್ಥನನ್ನಾಗಿ ಮಾಡಿ ಎಂದು ಕೇಳಿಕೊಳ್ಳಬೇಕೆಂಬ ಆಲೋಚನೆ ಬಂತು. ನಡೆದು ಬಳಲಿಕೆಯಾಗಿದ್ದುದರಿಂದ ಪಾದ ಮೀನುಖಂಡಗಳು ನೋಯುತ್ತಿದ್ದವು. ಉಪವಾಸವಿದ್ದುದರಿಂದ ಹೊಟ್ಟೆಯಲ್ಲಿ ಸಂಕಟವೂ ತೋರಿತ್ತು. ಮೊಣಕಾಲಿನ ತನಕ ನೀರಿನಲ್ಲಿ ಮುಳುಗಿಸಿ ಅದೇ ಬಂಡೆಯ ಮೇಲೆ ಕುಳಿತೆ. ನೀರಿನ ಸೆಳವು ಕಾಲಿನ ನೋವನ್ನು ತಿನ್ನುತ್ತಾ ಹಿತವಾಗಿತ್ತು. ಎದುರಿಗೆ ಕಾಲು ಕ್ರೋಶಕ್ಕೂ ಹೆಚ್ಚು ದೂರ ನದಿಯ ಪಾತ್ರ ಹರಡಿತ್ತು. ಮರಳ ಹರಹಿನ ನಡುವೆ ಅಲ್ಲಲ್ಲಿ ನಿಂತ ಬಂಡೆಗಳನ್ನು ಬಳಸಿ ನದಿಯ ಸೀಳುಗಳು ಹರಿಯುತ್ತಿದ್ದವು. ಹಿಂತಿರುಗಿ ನೋಡಿದೆ. ದಂಡೆಯ ಮೇಲೆ ವಟವೃಕ್ಷ. ಅದರ ಅಡಿಯಲ್ಲಿಯೂ ಒಂದು ಪಿಂಡ ಹಾಕಬೇಕು. ಅದರ ಹತ್ತಿರವೇ ಒಂದು ದೊಡ್ಡ ಮಂಟಪ. ಮಂಟಪದ ಹೊರಭಾಗದ ಬಯಲಿನಲ್ಲಿ ಮೂರು ಕಲ್ಲಿನ ಒಲೆಯನ್ನಿಟ್ಟು ಬೆಂಕಿ ಉರಿಸುತ್ತಿದ್ದರು. ಯಾರೋ ಪಿಂಡದ ಅನ್ನವನ್ನು ಬೇಯಿಸುತ್ತಿದ್ದಾರೆಂದುಕೊಂಡೆ. ನನ್ನ ಮನಸ್ಸು ಬೆಂಕಿಯ ಉರಿಯ ಮೇಲೆ ನೆಟ್ಟಿತು. ಬುದ್ಧನ ಮಾತು ನೆನಪಿಗೆ ಬಂತು. ವಸ್ತುವೆಂಬುದು ಉರಿ ಇದ್ದಂತೆ. ಪ್ರತಿಕ್ಷಣವೂ ಹೊಸದಾಗಿ ಹುಟ್ಟಿ ಅದೇ ಕ್ಷಣ ಸತ್ತು ಹೋಗುವ ಉರಿಯು ಹಿಂದು ಮುಂದಿನದರೊಡನೆ ಸಂಬಂಧವಿಲ್ಲದಿದ್ದರೂ ಶೀಘ್ರಗತಿಯಲ್ಲಿ ಹುಟ್ಟಿ ಸಾಯುವ ಕ್ಷಣ ಸರಣಿಗಳಿಂದ ಸತತವಾಗಿ ಕಾಣುವಂತೆ ವಸ್ತುಗಳೂ ನಮಗೆ ಸತತವೆಂದು ಗೋಚರಿಸುತ್ತವೆ. ಬುದ್ಧನ ವಿವರಣೆಯು ಎಷ್ಟು ನಿಜ! ಎನ್ನಿಸಿತು. ಆ ಉರಿಯನ್ನೇ ನೋಡುತ್ತಿದ್ದಾಗ ವಸ್ತುವೂ ಕ್ಷಣಿಕ ಜೀವವೂ ಕ್ಷಣಿಕವಾಗಿರುವಾಗ ಯಾರಿಗೆ ಯಾರು ಸಂಬಂಧ? ಯಾರಿಗೆ ಯಾಕೆ ಶ್ರಾದ್ಧಮಾಡಬೇಕು? ಆತ್ಮವೆಂಬುದು ಸತತ, ಶಾಶ್ವತ, ದೇಹಾಂತ್ಯವು ಆತ್ಮಾಂತ್ಯವಲ್ಲ. ರೂಪಾಂತರಗೊಂಡು ಪ್ರೇತಲೋಕದಲ್ಲಿ, ಯಮಲೋಕದಲ್ಲಿ, ವಿಷ್ಣುಪಾದದಲ್ಲಿ, ಬ್ರಹ್ಮಲೋಕದಲ್ಲಿ ಇರುತ್ತದೆಂಬ ಸತ್ಯದ ಮೇಲೆ ಶ್ರಾದ್ಧಕರ್ಮವನ್ನು ವಿಧಿಸಿದೆ. ಎಲ್ಲವೂ ಕ್ಷಣಿಕವಾದರೆ ಈ ಕರ್ಮಕ್ಕೆ ಯಾವ ಅರ್ಥವಿದೆ? ಮಾತಾಪಿತೃ ಪ್ರೇಮದ ಭಾವನಾತೃಪ್ತಿಗಾಗಿ ಇವೆಲ್ಲ ಏನು ಕರ್ಮಕಾಂಡ? ಎಲ್ಲ ಕರ್ಮಕಾಂಡಗಳನ್ನು ಕಿತ್ತೊಗೆಯಿರಿ ಎಂದಲ್ಲವೆ ಬುದ್ಧ ಹೇಳಿದುದು? ಎಂಬ ಚಿಂತನೆ ಹುಟ್ಟಿತು. ನೀರಿನಲ್ಲಿ ಮುಳುಗಿದ್ದ ಕಾಲನ್ನು ಮೇಲೆ ಎತ್ತಲು ಕೂಡ ಮನಸ್ಸಾಗದೆ ಹಾಗೆಯೇ ಕುಳಿತಿದ್ದೆ. ಅಪರಾಹ್ಣವಾದಂತೆ ಪಿಂಡಪ್ರದಾನ ಮಾಡುವ ಎಷ್ಟೋ ಜನಗಳು ನದೀತೀರಕ್ಕೆ ಬರತೊಡಗಿದರು. ಕೆಲವು ಪುರೋಹಿತರು ನಾನಿರುವಲ್ಲಿಗೆ ಬಂದು, ‘ಶ್ರಾದ್ಧ ಮಾಡಬೇಕೆ? ಯಾವ ದೇಶದವರು?’ ಎಂದು ಕೇಳಿದರು. ಇವತ್ತಲ್ಲ, ನಾಳೆ ಎಂದು ನಾನು ಹೇಳಿದೆ. ಶ್ರಾದ್ಧಮಾಡಲು ಬಂದಿಲ್ಲ ಎಂದರೆ ಇವೆಲ್ಲ ಏನು ಪದಾರ್ಥಗಳು ಎಂದು ಕೇಳಬಹುದಿತ್ತು. ಶ್ರಾದ್ಧ ಮಾಡದವರು ನದಿಯ ಈ ಭಾಗಕ್ಕೆ ಯಾಕೆ ಬಂದಿರಿ? ಎಂದೂ ಕೇಳಬಹುದಿತ್ತು. </p>

<p> ‘ನಾನು ಸಾಧನೆಮಾಡಿದ ತಂತ್ರವೂ ಇವನ್ನೇ ಹೇಳಿತ್ತು. ನೀವು ಹೇಳಿದ ಪ್ರಜ್ಞೆ ಮತ್ತು ಉಪಾಯಗಳ ಮಿಲನವನ್ನು ಯೋನಿಪೂಜೆಯಲ್ಲಿ ಸಾಧಿಸಲು ಹೇಳುತ್ತಾರೆ.’ </p>

<p> ‘ನೀವು ಅದನ್ನೂ ಸಾಧಿಸಿದ್ದಿರಾ? ಹೇಗೆ? ಅದರ ಅಂಗೋಪಾಂಗಗಳೇನು? ಕ್ರಮ ಯಾವುದು?’ ಅವನು ಉತ್ಸುಕನಾಗಿ ಕೇಳಿದ. </p>

<p> ‘ಅದನ್ನು ಹೇಳುವುದರಲ್ಲಿ ಅರ್ಥವಿಲ್ಲ. ಯಾಕೆಂದರೆ ಅದರಿಂದ ನನಗೆ ಯಾವ ಫಲವೂ ಲಭಿಸಲಿಲ್ಲ.’ </p>

<p> ಅವನು ಎಷ್ಟು ಒತ್ತಾಯಿಸಿದರೂ ನಾನು ಹೇಳಲಿಲ್ಲ. ಚಂದ್ರಿಕೆಯ ವಿಷಯವನ್ನು ಇವನೊಡನೆ ಹೇಳಲು ನನಗೆ ಮನಸ್ಸು ಬರಲಿಲ್ಲ. ಸಹಿಸಲಾರದ ಮನಃಸ್ಥಿತಿಯಲ್ಲಿ ವಜ್ರಪಾದರಿಗೆ ಹೇಳಿದ್ದೆ. ಅವರು ಇಲ್ಲಿಗೆ ಪ್ರವೇಶ ದೊರಕಿಸಿದ್ದರು. ಈಗ ಅಂತಹ ಮನಃಸ್ಥಿತಿ ಇರಲಿಲ್ಲ. ಅಲ್ಲದೆ ಎಷ್ಟಾದರೂ ಅವರು ಮಾತುಕತೆಗಳಲ್ಲಿ ಸಂಯಮ ಸಾಧಿಸಿರುವ ವ್ಯಕ್ತಿ. </p>

<p> ಸ್ಥಪತಿಯು ತಾನು ಹೊಸ ಹೊಸದಾಗಿ ತಿಳಿಯುತ್ತಿದ್ದ ಕಲ್ಪನೆಗಳನ್ನು ನನಗೆ ಆಯಾ ದಿನವೇ ವರದಿ ಒಪ್ಪಿಸುತ್ತಿದ್ದ. 'ತಥಾಗತ ಗುಹ್ಯವೇ ಬದಲಾವಣೆಯಾಗದ ಅನಂತಸತ್ಯ, ಅದೇ ವಜ್ರ. ಆಚಾರ್ಯ ನಾಗಾರ್ಜುನರು ಹೇಳಿದ ಶೂನ್ಯತೆ, ಆಚಾರ್ಯ ವಸುಬಂಧು ಹೇಳಿದ ವಿಜ್ಞಪ್ತಿಮಾತ್ರತೆಯು ಅದೇ.' </p>

<p> 'ಉಪನಿಷತ್ತಿನ ಬ್ರಹ್ಮಕಲ್ಪನೆಗೂ ಇದಕ್ಕೂ ಏನು ವ್ಯತ್ಯಾಸ?' ನಾನು ಕೇಳಿದೆ. </p>

<p> ತೌಲನಿಕ ಜಿಜ್ಞಾಸೆಯ ಈ ಪ್ರಶ್ನೆಗೆ ಉತ್ತರಹೇಳುವ ಅಧ್ಯಯನಬಲ ಅವನಿಗಿರಲಿಲ್ಲ. </p>

<p> 'ಎಡಭಾಗದ ಇಡಾನಾಡಿಯಲ್ಲಿ ವ್ಯಕ್ತವಾಗುವ ಬುದ್ಧತತ್ತ್ವವು ಗಂಡು, ಬಲಭಾಗದ ಪಿಂಗಳಾನಾಡಿಯಲ್ಲಿ ವ್ಯಕ್ತವಾಗುವ ಬುದ್ಧತತ್ತ್ವವು ಹೆಣ್ಣು. ಇವೆರಡೂ ಸುಷುಮ್ನಾದಲ್ಲಿ ಒಂದಾದಾಗ ಸಿದ್ಧಿ ದೊರಕಿ, ಮಹಾಮುದ್ರೆಯು ಲಭಿಸುತ್ತದೆ. ಬುದ್ಧತ್ವವೆಂದರೆ ಹೆಣ್ಣಾದ ಪ್ರಜ್ಞೆ, ಗಂಡಾದ ಉಪಾಯಗಳ ಅಭಿನ್ನತ್ವ.' ಎಂದು ಒಂದುದಿನ ನನ್ನನ್ನು ಕಂಡ ತಕ್ಷಣ ಉತ್ಸಾಹದಿಂದ ಹೇಳಿದ. </p>

<p> 'ನಾಡಿಗಳಲ್ಲಿ ಪ್ರವಹಿಸುವ ಪ್ರಾಣವಾಯುವನ್ನು ಯೋಗಸಾಧನೆಯಿಂದ ನಿಯಂತ್ರಿಸಿದರೆ ಕಾಲದ ಸುಳಿಗಳಿಂದ ಮೇಲೇರಿ ರೋಗ ಮತ್ತು ಸಾವುಗಳ ದುಃಖವನ್ನು ನಿವಾರಿಸಬಹುದು,' ಎಂದು ಇನ್ನೊಂದು ದಿನ ಹೇಳಿದ. </p>

<p> ನಾನು ಅವನೊಡನೆ ಅಧ್ಯಾತ್ಮತತ್ತ್ವಗಳ ಜಿಜ್ಞಾಸೆಗೆ ಇಳಿಯುತ್ತಿರಲಿಲ್ಲ. ಏಕೆಂದರೆ ಅವನು ಮೂಲತಃ ಶಿಲ್ಪಿ. ಕಲಾವಿದ. ತಾನು ಕೇಳುವ ತತ್ತ್ವಗಳನ್ನು ಶಿಲ್ಪದ ಪ್ರತಿಮೆಗಳಲ್ಲಿ ಅಭಿವ್ಯಕ್ತಿಸುವುದೇ ಅವನ ಗುರಿ. ಇಂಥ ತತ್ತ್ವವನ್ನು ಮೂಡಿಸಲು ಮುಖದಲ್ಲಿ ಇಂಥ ಭಾವ ಕಂಡರೆ ಸರಿಯಲ್ಲವೆ? ಎಂದು ಚಿಂತಿಸುತ್ತಿದ್ದ. ಯಾವ ಯಾವ ಅಂಗದ ಗಾತ್ರವನ್ನು ಹಿಗ್ಗಿಸಿದರೆ ಅಥವಾ ಕುಗ್ಗಿಸಿದರೆ ಯಾವ ಅರ್ಥ ಬರುತ್ತದೆ? ಈ ವಿವರಗಳನ್ನೆಲ್ಲ ಕಲ್ಲಿನಲ್ಲಿ ಮೂಡಿಸಲು ಹೊರಟರೆ ಏನೂ ವ್ಯಕ್ತವಾಗದ ಕಗ್ಗವಾಗಬಹುದಲ್ಲವೆ? ಎಂದೂ ಕೇಳುತ್ತಿದ್ದ. ಅವನ ಶಿಲ್ಪಕಲಾ ಸಮಸ್ಯೆಗಳು ನನಗೆ ಪೂರ್ತಿ ಅರ್ಥವಾಗುತ್ತಿರಲಿಲ್ಲ. ಆಗುತ್ತದೆಂದು ಅವನೂ ನಿರೀಕ್ಷಿಸುತ್ತಿರಲಿಲ್ಲ. ಅರ್ಧ ಅರ್ಥವಾದರೂ ಸಾಕು, ಅವನ ಮಾತುಗಳನ್ನು ತಾಳ್ಮೆಯಿಂದ ಕೇಳುವ ಒಬ್ಬ ಶ್ರೋತೃ, ಅವನಿಗೆ ಬೇಕಾಗಿತ್ತು. ಅಷ್ಟು ಪ್ರಯೋಜನ ನನ್ನಿಂದ ಆಗುತ್ತಿತ್ತು. ನನ್ನನ್ನೇ ಸಮಾಲೋಚಕನೆಂದು ಬಗೆದು ಅವನು ಮಾತನಾಡುತ್ತಿದ್ದ, ಮಾತನಾಡಿಕೊಳ್ಳುತ್ತಿದ್ದ. </p>

<p> ಬೆಳದಿಂಗಳಿನಲ್ಲಿ ಕಾಡುದಾರಿಯಲ್ಲಿ ಹೆಜ್ಜೆ ಹಾಕುತ್ತಾ ನಡೆದೆವು. ಪರಸ್ಪರ ಮಾತನ್ನೂ ಆಡುವಂತಿರಲಿಲ್ಲ. ನೊರಜುಗಲ್ಲುಗಳ ಮೇಲೆ ಹೆಜ್ಜೆ ಇಡುವಾಗ ಸಪ್ಪಳ ಮಾಡುತ್ತದೆಂದು ಪಾದರಕ್ಷೆ ಇಲ್ಲದೆ ನಡೆಯುತ್ತಿದ್ದೆವು. ಯುಗನದ್ಧನಾಗಿರುವ ಆ ತಾಂತ್ರಿಕನ ಸಾಧನೆಗೆ ಭಂಗ ತರುವಂತಿರಲಿಲ್ಲ. ನಡುರಾತ್ರಿಯಾಗಿತ್ತು. ನೆತ್ತಿಯ ಮೇಲಿನ ಚಂದ್ರಪ್ರಕಾಶದಲ್ಲಿ ಸಮತಟ್ಟಾದ ಬಂಡೆಯ ಮೇಲೆ, ಎರಡು ಕೈಗಳಿಂದಲೂ ಏನನ್ನೋ ತಬ್ಬಿಹಿಡಿದ ಒಬ್ಬ ವ್ಯಕ್ತಿಯು ನಿಂತಿರುವುದು ದೂರಕ್ಕೇ ಕಾಣುತ್ತಿತ್ತು. ನಾವು ಇನ್ನೂ ಎಚ್ಚರದಿಂದ ಹೆಜ್ಜೆಹಾಕುತ್ತಾ ನಿಧಾನವಾಗಿ ಸಮೀಪಿಸಿದೆವು. ವಾಸ್ತವವಾಗಿ ತಂತ್ರಸಾಧಕನು ಎರಡು ಕಾಲುಗಳ ಮೇಲೂ ಬಲವನ್ನು ಬಿಟ್ಟು ದೃಢವಾಗಿ ನಿಂತಿದ್ದ. ನಗ್ನವಾಗಿದ್ದ ಅವನ ಸೊಂಟಕ್ಕೆ ತನ್ನೆರಡು ಕಾಲುಗಳನ್ನು ಬಳಸಿ ಒಬ್ಬ ಹೆಂಗಸು ಅವನ ಕುತ್ತಿಗೆಗೆ ಕೈಗಳನ್ನು ಸುತ್ತಿಕೊಂಡಿದ್ದಳು. ಅವಳೂ ಸಂಪೂರ್ಣ ನಗ್ನಳು. ಅವಳ ವಯಸ್ಸು ಹೇಳಲು ತಿಳಿಯುತ್ತಿರಲಿಲ್ಲವಾದರೂ ಬೆಳದಿಂಗಳಿನಲ್ಲಿ ಮೃದುವಾಗಿ ಹೊಳೆಯುತ್ತಿದ್ದ ಅವಳ ಬೆನ್ನು ತೋಳು ಜಘನಗಳಿಂದ ಕಿರಿವಯಸ್ಸಿನವಳೆಂಬುದು ಸ್ಪಷ್ಟವಾಗಿತ್ತು. ಅವನು ದೃಢಕಾಯ. ಲತೆಯಂತೆ ಅವನನ್ನು ಸುತ್ತುವರೆದಿದ್ದ ಅವಳು ತೆಳು ಮೈಯಿಯವಳು. ಅವರು ಮೈಥುನದಲ್ಲಿ ಒಂದಾಗಿದ್ದುದು ಸ್ಪಷ್ಟವಾಗಿತ್ತು. ಬೌದ್ಧತಾಂತ್ರಿಕನಾಗಿದ್ದುದರಿಂದ ಅವನಿಗೆ ಜಟಾ ಜೂಟಾವಿರಲಿಲ್ಲ. ನುಣ್ಣಗೆ ಬೋಳಿಸಿದ ನೆತ್ತಿ ಮತ್ತು ಕೆನ್ನೆ ಗದ್ದಗಳು ಬೆಳದಿಂಗಳಿನಲ್ಲಿ ಹೊಳೆಯುತ್ತಿದ್ದವು. ಅವನ ಕಣ್ಣುಗಳು ಧ್ಯಾನಲೀನವಾಗಿರುವಂತೆ ಮುಚ್ಚಿದವು. ನಾನು ನಿಶ್ಶಬ್ದವಾಗಿ ಅವನ ಹಿಂಬದಿಗೆ ಹೋಗಿ ನೋಡಿದೆ. ಅವಳ ಕಣ್ಣುಗಳೂ ಅಂತರ್ಲೀನವಾಗಿದ್ದವು, ಮೈಥುನದ ಪರಾಕಾಷ್ಠಲೀನತೆಯೋ ಧ್ಯಾನಲೀನತೆಯೋ ಎಂಬ ವ್ಯತ್ಯಾಸ ನನಗೆ ತಿಳಿಯಲಿಲ್ಲ. ಅವನಾಗಲಿ ಅವಳಾಗಲಿ ಸ್ವಲ್ಪವೂ ಚಲಿಸುತ್ತಿರಲಿಲ್ಲ. ಎಷ್ಟೇ ಕೃಶಾಂಗಿಯಾದರೂ ಅವಳ ಆ ಭಾರವನ್ನು ಹೊತ್ತು ಅವನು ಅದು ಹೇಗೆ ಅಷ್ಟು ಹೊತ್ತು ನಿಶ್ಚಲನಾಗಿ ನಿಂತಿದ್ದಾನೆಂದು ನನಗೆ

ಆಶ್ಚರ್ಯವಾಯಿತು. ಅವಳಿಗೂ ಅಷ್ಟೆ. ಸುತ್ತುಬಳಸಿ ಬಿಗಿ ಹಿಡಿದಿದ್ದ ಮೊಣಕಾಲು ತೊಡೆ ತೋಳುಗಳಿಗೆ ಸೋಲಿನ ನೋವು ಬರುತ್ತಿಲ್ಲವೆ? ಅವರಿಬ್ಬರೂ ಹಠಯೋಗದಲ್ಲಿ ಪಳಗಿದವರೆ? ಯುಗನದ್ಧರಾಗಲು ಹೀಗೆ ನಿಂತೇ ಯಾಕಿರಬೇಕು? ಬಂಡೆಯ ಮೇಲೆ ಮಲಗಿ ಅಥವಾ ಎದುರು ಬದುರು ಕುಳಿತು ಯಾಕೆ ಸಹಜಾಸನದಲ್ಲಿ ಸಂಯೋಗಗೊಳ್ಳಬಾರದು? ಎಂಬ ಜಿಜ್ಞಾಸೆಯಲ್ಲಿ ನಾನು ನೋಡುತ್ತಾ ನಿಂತೆ. ಸ್ಥಪತಿಯು ನನಗಿಂತ ಹತ್ತಿರ ಹೋಗಿ ಬಗ್ಗಿ ಇಣುಕಿ ಇಬ್ಬರ ಶರೀರಗಳ ಮಾಟ ಬಾಗು ಬಳುಕು ಮತ್ತು ಮುಖಭಾವಗಳನ್ನು ಹೆಚ್ಚು ಸೂಕ್ಷ್ಮವಾಗಿ ನಿರುಕಿಸುತ್ತಿದ್ದ. ಬೇರೆ ಬೇರೆ ಕೋನಗಳಲ್ಲಿ ಬೇರೆ ಬೇರೆ ದೂರಗಳಲ್ಲಿ ನಿಂತು ಗಮನಿಸುತ್ತಿದ್ದ. ಎಷ್ಟೋ ಹೊತ್ತು ಕಳೆಯಿತು. ಅಥವಾ ಕಳೆದಂತೆ ನನಗೆ ಭಾಸವಾಯಿತು. ಈ ನಿಶ್ಚಲ ನಿಶ್ಶಬ್ದ ಐಕ್ಯದಲ್ಲಿ ಕಾಲದ ತುಡಿತವೇ ಇಲ್ಲದೆ ಬಹಳ ಹೊತ್ತು ಕಳೆದಂತೆನ್ನಿಸಿತು. ಅವರು ಸಂಯೋಗದಿಂದ ಹೊರಬರುವುದು ಎಷ್ಟು ಹೊತ್ತಿಗೆ? ಆಗ ನಾವಿರಬಹುದೋ ಬಾರದೋ? ಪ್ರಾಯಶಃ ಇರಬಾರದು. ಹೇಳಿ ಕೇಳಿ ಇದು ಗುಹ್ಯಮಾರ್ಗ. ಗುಹ್ಯಸಾಧನೆ. ಹೊರಬಂದನಂತರ ಮಾಡಬೇಕಾದ ತಾಂತ್ರಿಕ ಕಲಾಪಗಳಿರಬಹುದು. ಬಂಡೆಯ ನೆಲವನ್ನು ಗಮನಿಸಿದೆ. ಅರಿಶಿನ ಕುಂಕುಮ, ಗಂಟು ಹಾಕಿದ್ದ ನೂಲಿನ ಎಳೆ, ಕತ್ತರಿಸಿ ಹಿಂಡಿದ್ದ ನಿಂಬೆಯ ಹಣ್ಣು ಮೊದಲಾಗಿ ಚೆಲ್ಲಿದ್ದವು. ಇವೆಲ್ಲ ನನಗೆ ಪರಿಚಿತವಾದವುಗಳೇ. </p>

<p> 'ಬ್ರಾಹ್ಮಣನು ಲೌಕಿಕ ರಾಜನ ಆಧಿಪತ್ಯಕ್ಕೆ ಒಳಪಡಲೇಬಾರದು. ಬುಧನೇ ಅವನ ರಾಜ ಎಂಬ ವೇದದ ಮಾತನ್ನು ಪ್ರತಿಯೊಬ್ಬ ವೈದಿಕನೂ ಪಾಲಿಸಬೇಕು. ರಾಜಾಶ್ರಯವನ್ನು ಒಪ್ಪಿಕೊಳ್ಳಕೂಡದು. ಗುರ್ಜರ ಪ್ರತೀಹಾರರ ವೈದಿಕನಿಷ್ಠೆಯನ್ನು ನಾನು ಮೆಚ್ಚುತ್ತೇನಾದರೂ ಅವರಿಂದ ಯಾವ ದತ್ತಿ ದಾನಗಳನ್ನೂ ನಾನು ಪಡೆದಿಲ್ಲ. ಗೊತ್ತಿದೆಯೆ?' </p>

<p> 'ಗೊತ್ತು. ತಮ್ಮನ್ನು ಕಂಡರೆ ನಮ್ಮ ಚಕ್ರವರ್ತಿಗಳು ಶಿರಸಾವಂದಿಸುತ್ತಾರೆ.' </p>

<p> 'ಯಾರು ಮಾಡಿದರೂ ಅಶ್ವಮೇಧ ಮಾಡುವುದು ಪುಣ್ಯ ಕೆಲಸ. ತಕ್ಕ ಶಕ್ತಿ ಸೌಲಭ್ಯಗಳಿಲ್ಲದವನು ಮಾಡಹೊರಟರೆ ನಗೆಪಾಟಲಿಗೀಡಾಗುತ್ತಾನೆ. ಸಮರ್ಥರಾದ ಗುರ್ಜರ ಪ್ರತೀಹಾರರು ಮಾಡಹೊರಟಿರುವ ಈ ಮಹಾಕರ್ಮಕ್ಕೆ ನೀವು ಇತರ ಪಂಡಿತರೊಡನೆ ಬಂದು ನಡೆಸಿಕೊಡಬೇಕೆಂಬುದು ನನ್ನ ಅಪೇಕ್ಷೆ ಎಂದು ಹೇಳಿ. ಒಪ್ಪಿಕೊಳ್ಳುತ್ತಾರೆ.' </p>

<p> 'ಗುರುಗಳು ತುಷಾನಲ ಪ್ರವೇಶಮಾಡಿದರು. ಈ ರಾಜದೂತರು ಕಾರ್ಯಸಾಧನೆಗಾಗಿ ಅವರ ಹೆಸರು ಬಳಸಿ ಸುಳ್ಳುಹೇಳುತ್ತಾರೆಂದು ಅವರು ತಿಳಿದರೆ?' </p>

<p> 'ಹೌದಲ್ಲವೆ!' ಎಂದು ತಮ್ಮ ಮೂವರು ಶಿಷ್ಯರ ಕಡೆಗೆ ನೋಡಿ, 'ಅವರಿಗೆ ಇವರು ಯಾರ ಪ್ರತ್ಯಕ್ಷಪರಿಚಯವೂ ಇಲ್ಲ. ಅಲ್ಲಿ ಕಂಬದ ಹತ್ತಿರ ನಿಂತಿರುವ ನಾಗಭಟ್ಟರು ಅವರ ನೇರಶಿಷ್ಯರು. ಇವರನ್ನು ಕರೆದೊಯ್ಯಿರಿ. ಇವರೇ ಸಾಕ್ಷಿ. ನೀವು ಆಡುವ ಮಾತನ್ನು ಅವರೇ ಆಡಲಿ.'

</p>

<p> ಜಯಸಿಂಹರು ಮತ್ತೆ ವಾದಮಾಡಲಿಲ್ಲ. ಮಾತು ಬೆಳಸುವ ಅಥವಾ ಅನ್ಯ ವಿಷಯಗಳೂ ಈ ಸನ್ನಿವೇಶದಲ್ಲಿ ಇರಲಿಲ್ಲ. 'ಗುರುಗಳನ್ನು ಇನ್ನೂ ಮಾತನಾಡಿಸಿ ದಣಿಸುವ ಪಾಪಕ್ಕೆ ಗುರಿಯಾಗಲಾರೆ,' ಎಂದರು. </p>

<p> 'ನಿಮ್ಮ ಯಾಗ ವಿಧಿಪೂರ್ವಕವಾಗಿ ನಡೆದು ಸಮಸ್ತ ಭರತಖಂಡದಲ್ಲಿ ವೈದಿಕಧರ್ಮ ನೆಲೆಸಲಿ,' ಎಂದು ಅವರು ಕೈ ಎತ್ತಿ ಆಶೀರ್ವದಿಸಿದರು. </p>

<p> ಮೇಲೆ ಎದ್ದು ಹೋಮಕುಂಡಕ್ಕೂ ಗುರುಗಳಿಗೂ ನಮಸ್ಕರಿಸಿ ಗುರುಗಳು ಕೊಟ್ಟ ಹೋಮಕುಂಡದ ಭಸ್ಮವನ್ನು ಹಣೆಗೆ ಇಟ್ಟುಕೊಂಡು ಜಯಸಿಂಹರು ಹೊರಗೆ ಬಂದರು. ನಾನು ಅವರನ್ನನುಸರಿಸಿದೆ. ಹಿಂದೆಯೇ ಬಂದ ಭೂಮದೇವರು, 'ಪಾಕ ಸಿದ್ಧವಾಗಿದೆ. ಬೋಜನಮಾಡಿಕೊಂಡು ಹೋಗಬೇಕು,' ಎಂದರು. </p>

<p> 'ನಮ್ಮ ಅಂಗರಕ್ಷಕರು ಅರ್ಧಕ್ರೋಶ ದೂರದಲ್ಲಿ ಬೀಡಾರ ಬಿಟ್ಟು ಅಡಿಗೆ ಮಾಡುತ್ತಿದ್ದಾರೆ. ಅಲ್ಲಿಗೆ ಹೋಗುತ್ತೇವೆ.' </p>

<p> 'ಮಧ್ಯಾಹ್ನ ಆಶ್ರಮಕ್ಕೆ ಬಂದು ಊಟಮಾಡದೆ ಹೋಗಬಾರದು.' </p>

<p> ಅವರ ಜೊತೆಗೆ ನಾನೂ ಕೂತು ಊಟಮಾಡಿದೆ. ಅಡಿಗೆಯವನು ಬಡಿಸಿದ, ಭೂಮದೇವರು ಉಪಚಾರ ಹೇಳಿದರು. ಇಲ್ಲಿ ಯಾವ ಊಟದಲ್ಲೂ ತ್ಯಾಗ, ಬಡತನವಿರಲಿಲ್ಲ. ನೈವೇದ್ಯ ರೂಪವಾಗಿ ಅಗ್ನಿಗೆ ಅರ್ಪಿಸಲು ಮಾಡಿದ ಅಡಿಗೆ, ಸಮೃದ್ಧ ಹಾಲು ತುಪ್ಪಗಳನ್ನು

ಬೆರೆಸಿದ ಪಾಯಸ, ತೋವೆ, ಶಾಲ್ಯನ್ನ, ದಧಿಗಳು. ಜಯಸಿಂಹರ ಮನೆಯಲ್ಲಿ ಇದು ತೀರ ಕಡಮೆಯಲ್ಲ ಎಂಬ ಹೋಲಿಕೆಯು ಈಗ ಬಂತು. ಬೋಜನವಾದ ನಂತರ ಜಯಸಿಂಹರು ನನ್ನ ಕೈಲಿ, 'ಗುರುಗಳ ಆದೇಶ ಕೇಳಿದಿರಲ್ಲ. ನಮ್ಮ ಜೊತೆ ನಡೆಯಿರಿ. ನಮ್ಮವರದೆಲ್ಲ ಊಟವಾದ ನಂತರ ರಥದಲ್ಲಿ ಪ್ರಯಾಣ ಮಾಡೋಣ,' ಎಂದರು. </p>

<p> ದಿನದ ವಾಕ್ಯಾರ್ಥ ಮುಗಿದ ನಂತರ ಸಂಜೆ ನಾನು ಶಿವಾಲಯಕ್ಕೆ ಹೋಗತೊಡಗಿದೆ. ದೂರದೇಶದಿಂದ ಬಂದಿರುವ ಈ ತರುಣ ಸನ್ಯಾಸಿಯು ತಮ್ಮ ರಾಜ್ಯದ ದಿಗ್ಗಜ ಮಂಡನಮಿಶ್ರರೊಡನೆ ವಾದ ಮಾಡುತ್ತಿದ್ದಾನೆಂಬ ಸುದ್ದಿ ಹರಡಿ ಕುತೂಹಲದಿಂದ ಜನಗಳು ಸೇರತೊಡಗಿದರು. ದಿನವೂ ಸಂಜೆ ಶಂಕರ ಯತಿಯು ವಾಕ್ಯಾರ್ಥದಿಂದ ಹಿಂತಿರುಗಿದ ಮೇಲೆ ದೇವಾಲಯದ ಪೌಳಿಯಲ್ಲಿ ಸೇರುತ್ತಿದ್ದ ಜನರಿಗೆ ಪ್ರವಚನ ಮಾಡುತ್ತಿದ್ದರು. ಎಲ್ಲರೂ ದೇವರ ಪೂಜೆ ಮಾಡಬೇಕು. ಯಾವ ದೇವರಾದರೂ ಸರಿ. ಯಾವ ಹೆಸರಿನಿಂದ ಕರೆದರೂ ಸರಿ ಅದು ಈಶ್ವರನೇ. ಎಲ್ಲ ಹೆಣ್ಣುದೇವತೆಗಳೂ ಶಕ್ತಿಯ ಸ್ವರೂಪವೇ. ಜಗತ್ತಿನ ಸೃಷ್ಟಿಯಾಗುವುದು ಈ ಶಕ್ತಿಯಿಂದ. ನಮ್ಮನ್ನೆಲ್ಲ ಆವರಿಸಿರುವ ಮಾಯೆಯೂ ಈ ಶಕ್ತಿಯೇ. ನಿನ್ನ ಮಾಯೆಯಿಂದ ನನ್ನನ್ನು ಮುಕ್ತಗೊಳಿಸೆಂದು ನಾವು ಪ್ರಾರ್ಥಿಸಬೇಕು ಎಂದು ಬೋಧಿಸುತ್ತಿದ್ದರು. ತಂತ್ರಮಾರ್ಗದ ತತ್ತ್ವಗಳನ್ನೂ ಅವರ ಬೋಧನೆಯು ಒಳಪಡಿಸಿಕೊಂಡಿತ್ತು. ಎಲ್ಲ ಮತ ಪಂಥಗಳನ್ನೂ ಕ್ರೋಢೀಕರಿಸಿ ಸೌರ, ಶೈವ, ವೈಷ್ಣವ, ಶಾಕ್ತ, ಕಾಪಾಲಿಕ, ಗಾಣಪತ್ಯಗಳೆಂಬ ಒಟ್ಟು ಆರು ಮತಗಳನ್ನು ಅವರು ಪ್ರಸ್ತಾಪಿಸುತ್ತಿದ್ದರು. ಉಳಿದೆಲ್ಲ ದೇವತೆಗಳೂ ಈ ಆರರಲ್ಲೊಂದರ ರೂಪಗಳು, ನೀವು ಯಾವ ದೇವ ದೇವತೆಯನ್ನು ಪೂಜಿಸಿದರೂ ಈ ಆರರಲ್ಲೊಂದಕ್ಕೆ, ಆ ಮೂಲಕ ಈಶ್ವರನಿಗೆ ಸಲ್ಲುತ್ತದೆ ಎಂಬುದು ಅವರ ಸಿದ್ಧಾಂತ. ಆದರೆ ಆ ಪೂಜೆ ಸಮಯಮಾರ್ಗದಲ್ಲಿ ಆಗಬೇಕು, ವಾಮಾಚಾರದಲ್ಲಲ್ಲ. ಕರ್ಮಮಾರ್ಗಿಗಳಂತೆ ಯಜ್ಞ ಯಾಗಾದಿಗಳಿಗೆ ಅವರು ಮಹತ್ತ್ವ ಕೊಡುತ್ತಿರಲಿಲ್ಲ. ದೇವಾಲಯಗಳನ್ನು ಕಟ್ಟಿಸಿ, ಇರುವ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿ ಎಂಬುದು ಅವರ ತತ್ತ್ವ. ತಂತ್ರಮತದ ಅಂಶಗಳನ್ನೂ ಒಪ್ಪಿಕೊಂಡಿದುದರಿಂದ ವಿಗ್ರಹ ಮತ್ತು ದೇವಾಲಯಗಳನ್ನು ನಿರ್ಮಿಸುವ ಸ್ಥಪತಿಗಳಿಗೆ ಸುಗ್ಗಿಯಾಗುವಂತಿತ್ತು ಅವರ ಸಿದ್ಧಾಂತ. </p>

<p> ಪಾಠಶಾಲೆಯಲ್ಲಿ ಬೆಳಗಿನಿಂದ ಸಂಜೆಯವರೆಗೆ ಅವರ ವಾದಗಳು ಜೀವ, ಬ್ರಹ್ಮ, ಕಾರ್ಯ - ಕಾರಣ ಸಂಬಂಧ, ಜಗತ್ತು, ಈಶ್ವರ, ಅವಿದ್ಯಾ, ಮಾಯಾ ಹೀಗೆ ಅತ್ಯಂತ ಗಹನ ಕಲ್ಪನೆಗಳನ್ನು ಕುರಿತು ಇರುತ್ತಿದ್ದವು. ಜಗತ್ತು ಮಿಥ್ಯೆ, ಆದುದರಿಂದ ಅದರ ಕರ್ತೃವಾದ ಈಶ್ವರನೂ ಮಿಥ್ಯೆ, ಬ್ರಹ್ಮ ಒಂದೇ ಸತ್ಯ ಎಂದು ಅಲ್ಲಿ ಹೇಳುವ ಇವರು ಇಲ್ಲಿ ದೇವ ದೇವತೆಗಳು ದೇವಾಲಯ ಪೂಜಾವಿಧಾನಗಳನ್ನು ವಿವರಿಸುತ್ತಿದ್ದರು. ನನಗೆ ಗೊಂದಲವಾಯಿತು. ಈತನ ಪ್ರಾಮಾಣಿಕತೆಯ ಬಗೆಗೇ ಶಂಕೆ ಮೂಡಿತು. ಒಂದು ದಿನ ಹಾಗೆಂದು ಕೇಳಿದೆ. ಅವರು ಹೇಳಿದರು: 'ವಿರೋಧವಿಲ್ಲ. ಇದು ತಾತ್ತ್ವಿಕ ಜಿಜ್ಞಾಸೆಯನ್ನು ಮುಟ್ಟಲಾರದ ಜನಸಾಮಾನ್ಯರಿಗೆ. ಮುಟ್ಟಿದವರು ಕೂಡ ಇದನ್ನು ತಿರಸ್ಕರಿಸಬೇಕಿಲ್ಲ. ರೂಪಾತೀತವನ್ನು ರೂಪದಲ್ಲಿ ಭಾವಿಸಿ ಉಪಾಸಿಸುವ ಅವಕಾಶವಿಲ್ಲದಿದ್ದರೆ ಜನಸಾಧಾರಣರಿಗೆ ಶೂನ್ಯ ಕವಿಯುತ್ತದೆ. ಜನಸಾಮಾನ್ಯರಿಗೆ ಉಪಾಸನೆಯ ಸಾಧನವನ್ನು ಸೃಷ್ಟಿಸಿಕೊಡುವುದೇ ಶಿಲ್ಪಿಯ ಕೆಲಸ,' ಎಂದರು. ನನಗೆ ತಕ್ಷಣ ಎಷ್ಟೋ ಸಂಗತಿಗಳು ಅರ್ಥವಾದಂತೆ ಭಾಸವಾಯಿತು. </p>

<p> 'ಈಗ: ಶಬ್ದಪ್ರಯೋಗದ ಗುರಿ ಅರ್ಥಬೋಧೆಯೇ ಹೊರತು ಕ್ರಿಯಾಪ್ರಚೋದನೆಯಲ್ಲ. ಅರ್ಥವನ್ನು ತಿಳಿಸಿದ ತರುವಾಯ ಅದು ಕ್ರಿಯೆಯಲ್ಲಿ ತೊಡಗಿಸಬಹುದು, ತೊಡಗಿಸದೆಯೂ ಇರಬಹುದು. ಆದರೆ ಅರ್ಥವನ್ನು ಮಾತ್ರ ತಿಳಿಸಲೇಬೇಕು. ಇಲ್ಲದಿದ್ದಲ್ಲಿ ಅದು ಶಬ್ದ ಎನಿಸಿಕೊಳ್ಳುವುದಿಲ್ಲ. ಲೋಕವ್ಯವಹಾರದಲ್ಲಿಯೂ ಅಷ್ಟೆ, ವೇದಮಂತ್ರಗಳಲ್ಲಿಯೂ ಅಷ್ಟೆ. ಶಬ್ದದ ಅರ್ಥ ಕ್ರಿಯಾಪ್ರಚೋದನೆ ಎಂಬುದು ನಿಮ್ಮ ಸಿದ್ಧಾಂತವೇ ಹೊರತು ಸರ್ವಸಮ್ಮತ ಅಭಿಪ್ರಾಯವಲ್ಲ. ವೇದದಲ್ಲಿ ಎರಡು ಬಗೆಯ ಶಬ್ದಪ್ರಯೋಗಗಳೂ - ಅರ್ಥಬೋಧೆ, ಕ್ರಿಯಾಪ್ರಚೋದನೆ - ಇವೆ. ಅವುಗಳಲ್ಲಿ ಒಂದು ಮಾತ್ರ ಪ್ರಮಾಣ ಇನ್ನೊಂದಲ್ಲ ಎನ್ನುವುದು ಸರಿಯಲ್ಲ. ನೀವು ಖಂಡಿಸುವ ವೇದಾಂತ ವಾಕ್ಯಗಳು ವೇದಗಳ ಅಂತ್ಯಭಾಗವಾದ ಆರಣ್ಯಕಗಳಲ್ಲಿ ಮಾತ್ರವಲ್ಲದೆ ನೀವೇ ಪ್ರಮಾಣವೆಂದು ಒಪ್ಪಿರುವ ವೇದದ ಕರ್ಮಕಾಂಡದ ಸಂಹಿತೆ, ಬ್ರಾಹ್ಮಣಗಳ ಭಾಗಗಳಲ್ಲಿ ಬರುತ್ತವೆ. ಆದ್ದರಿಂದ ವೇದಾಂತವು ಕರ್ಮಕಾಂಡದಷ್ಟೇ ಪ್ರಮಾಣ. </p>

<p> 'ಎರಡನೆಯದಾಗಿ ನೀವೆನ್ನುವಂತೆ ಜ್ಞಾನದಿಂದ ಪುರುಷಾರ್ಥವನ್ನು ಸಾಧಿಸಲಾಗುವುದಿಲ್ಲ ಎನ್ನುವುದು ಮೂರು ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ ಮತ್ತು ನಿಮ್ಮ ಪ್ರಕಾರ ಪರಮಪುರುಷಾರ್ಥವಾದ ಸ್ವರ್ಗ ಇವುಗಳ ವಿಷಯದಲ್ಲಿ ನಿಜ. ಆದರೆ ವೇದಾಂತವು

ಇವುಗಳಿಗಿಂತ ವಿಭಿನ್ನವಾದ, ಶ್ರೇಷ್ಠವಾದ, ಪುನರಾವೃತ್ತಿರಹಿತವಾದ ಸಚ್ಚಿದಾನಂದಸ್ಥಿತಿಯಾದ ಮೋಕ್ಷವೆಂಬ ಪರಮಪುರುಷಾರ್ಥವನ್ನು ನಿರೂಪಿಸುತ್ತದೆ. ಅದಕ್ಕೆ ಸಾಧನವು ಕೇವಲ ಜ್ಞಾನ ಎಂದೂ ತಿಳಿಸುತ್ತದೆ. ಇದನ್ನು ಕೇವಲ ಜ್ಞಾನದ ಪ್ರಶಂಸೆ ಎಂದು ಹೇಳಲಾಗದು. ಏಕೆಂದರೆ ಜ್ಞಾನವನ್ನು ಪಡೆದು ಜೀವನ್ಮುಕ್ತರಾದವರ ಪರಂಪರೆಯನ್ನು ನಾವು ಶ್ರುತಿ, ಸ್ಮೃತಿ, ಇತಿಹಾಸಗಳಲ್ಲಿ ಓದುತ್ತೇವೆ; ಲೋಕಜೀವನದಲ್ಲಿಯೂ ಅಂತಹವರು ಕಾಣಿಸಿಕೊಂಡಿದ್ದಾರೆ. ನಮ್ಮ ಋಷಿಗಳು, ಆಚಾರ್ಯರು ಆ ಪಂಕ್ತಿಗೆ ಸೇರಿದವರು. ಹೀಗೆ ವೇದಾಂತಕ್ಕೆ ಶ್ರುತಿ, ಯುಕ್ತಿ ಮತ್ತು ಅನುಭವಗಳ ಪ್ರಮಾಣ ಇದೆ ಎಂದಾಯಿತು. </p>

<p> 'ಈಗ ಸಂನ್ಯಾಸಾಶ್ರಮದ ಪ್ರಶ್ನೆ. ಯಾವಜ್ಜೀವವೂ ಅಗ್ನಿಹೋತ್ರವನ್ನು ಮಾಡುತ್ತಿರಬೇಕು ಎನ್ನುವ ಶ್ರುತಿಯೇ ಕರ್ಮಗಳಿಂದ ಗಳಿಸಿದ ಸ್ವರ್ಗಾದಿಲೋಕಗಳನ್ನು ಪರೀಕ್ಷಿಸಿ, ಅವುಗಳನ್ನು ನಶ್ವರವೆಂದು ಕಂಡು ಅವುಗಳ ಬಗೆಗೆ ವೈರಾಗ್ಯ ತಾಳಬೇಕು ಎಂದು ಬೋಧಿಸುತ್ತದೆ. ಅಮೃತತತ್ವವೆಂಬ ಸ್ಥಿತಿಯೊಂದು ಉಂಟೆಂದು ತಿಳಿಸಿ ಅದನ್ನು ಕರ್ಮದಿಂದಾಗಲಿ ಮಕ್ಕಳಿಂದಾಗಲಿ ಹಣದಿಂದಾಗಲಿ ಪಡೆಯಲಾಗದು, ತ್ಯಾಗದ ಮೂಲಕ ಮಾತ್ರ ಅದು ಸಾಧ್ಯ ಎಂದು ಇನ್ನೊಂದು ಶ್ರುತಿ ತಿಳಿಸುತ್ತದೆ. ವೇದಾಂತ ವಿಜ್ಞಾನದ ಸುನಿಶ್ಚಿತವಾದ ಅರ್ಥವನ್ನು ತಿಳಿದುಕೊಂಡು ಶುದ್ಧ ಸತ್ತರಾದ ಯತಿಗಳು ಸಂನ್ಯಾಸ ಯೋಗದ ಮೂಲಕ ಬ್ರಹ್ಮಲೋಕವನ್ನು ತಲುಪಿ ಸಂಸಾರದಿಂದ ಸಂಪೂರ್ಣವಾಗಿ ಮುಕ್ತರಾಗುತ್ತಾರೆ ಎಂದೂ ಹೇಳುತ್ತದೆ. ವಿಶುದ್ಧವಾದ ಆತ್ಮಸ್ವರೂಪವೇ ಪರಮಸ್ಥಾನವೆಂದು ಗ್ರಹಿಸಿದ ವ್ಯಕ್ತಿಗಳು ಪುತ್ರಕಾಮನೆ, ವಿತ್ತಕಾಮನೆ, ಲೋಕಕಾಮನೆಗಳನ್ನು ಬಿಟ್ಟಿದ್ದು ಭಿಕ್ಷಾಚರ್ಯಕ್ಕೆ ತೊಡಗುತ್ತಾರೆ ಎಂದು ಯಾಜ್ಞವಲ್ಕ್ಯರು ಸ್ವಾನುಭವವನ್ನು ಪ್ರಕಟಿಸಿದ್ದಾರೆ. ಆದ್ದರಿಂದ ಸಂನ್ಯಾಸಾಶ್ರಮವು ಮೋಕ್ಷಸಾಧಕವಾದ ಆಶ್ರಮ ಎಂದಷ್ಟೇ ಅಲ್ಲ, ಅದರ ಏಕೈಕ ಸಾಧನ ಎನ್ನುವುದೂ ಸೂಚಿತವಾಗುತ್ತದೆ. ಹೀಗೆ ಸಂನ್ಯಾಸವು ಶ್ರುತಿವಿರುದ್ಧವಲ್ಲ, ಶ್ರುತಿಸಿದ್ಧವಾದ ಅತ್ಯುನ್ನತ ಆಶ್ರಮ ಎಂದು ಸಿದ್ಧವಾಗುತ್ತದೆ. ಗೃಹಸ್ಥಧರ್ಮದಲ್ಲಿ ಎಷ್ಟೇ ನೀತಿಸಾಧನೆ ಇದ್ದರೂ ಅದು ನೀತಿಯ ಮೂಲಕ್ಕೆ ನಮ್ಮನ್ನು ಎತ್ತುವುದಿಲ್ಲ. ಸರ್ವಸಂಗ ಪರಿತ್ಯಾಗವಾದ ಸಂನ್ಯಾಸವೊಂದೇ ಇದನ್ನು ಮಾಡಬಲ್ಲದು. </p>

<p> ಹೆಂಡತಿಯ ಸಾವಿನ ದುಃಖವು ಜಯಸಿಂಹರಲ್ಲಿ ನಿವೃತ್ತಿಯ ಮನೋಭಾವವನ್ನು ಹುಟ್ಟಿಸಿತ್ತು. ಐವತ್ತನ್ನು ಸಮೀಪಿಸುವ ವಯಸ್ಸು. ಆರೋಗ್ಯಪೂರ್ಣವಾದ ಸುಷ್ಠ ದೇಹ. ರಾಜ್ಯಕರ್ತವ್ಯ ಭಾರದಿಂದ ಬಿಡುವು ದೊರೆತು ಲಹರಿ ಉಕ್ಕಿದಾಗ ರಸಿಕತನದಲ್ಲಿ ಹದವರಿತು ಹರಿಯುತ್ತಿದ್ದರೇ ವಿನಾ ಹಲವು ಮದುವೆಗಳ ಹುಚ್ಚಿಗೆ ಹೋದವರಲ್ಲ. ಹೆಂಡತಿ ಎಂದರೆ ಪ್ರೀತಿಯೂ ಇತ್ತು. ಮೂರು ಹೆಣ್ಣು ಎರಡು ಗಂಡು ಮಕ್ಕಳ ಕುಟುಂಬವನ್ನು ನಿಷ್ಠ ಪರಿಚಾರಕಿಯರ ಸಹಾಯದಿಂದ ಅವರ ವೃದ್ಧ ತಾಯಿ ನಿಭಾಯಿಸುತ್ತಿದ್ದಾರೆ. ಇನ್ನೊಂದು ಮದುವೆಯಾಗು ಎಂದು ಮಗನನ್ನು ಒತ್ತಾಯಿಸುತ್ತಿದ್ದಾರೆ. ಒಂದೇ ರಥದಲ್ಲಿ  ಕೂತು ಪ್ರಯಾಣಮಾಡುವಾಗ ಜಯಸಿಂಹರು ತಮ್ಮ ದುಃಖ ಒಂಟಿತನಗಳನ್ನು ನನ್ನೊಡನೆ ಸಂಸ್ಕೃತದಲ್ಲಿ ಹೇಳಿಕೊಂಡರು, ಸಾರಥಿಗೆ ತಿಳಿಯಬಾರದೆಂದು. ಮತ್ತೊಂದು ಮದುವೆಯಾಗುವ ಇಚ್ಛೆ ಅವರಿಗೆ ಕಿಂಚಿತ್ತೂ ಇಲ್ಲ. ಮಕ್ಕಳ ಹೊಣೆ ಇಲ್ಲದಿದ್ದರೆ ಸಂನ್ಯಾಸಿಯೋ ಭಿಕ್ಕುವೋ ಆಗಿ ಹೋಗುವ ಮನಸ್ಸು. ಆದರೂ ಕರ್ತವ್ಯಚ್ಯುತನಾಗಬಾರದೆಂದು ಮಾಹಿಷ್ಮತಿಗೆ ಹೊರಟೆ, ಎಂದರು. ಪತ್ನೀವಿಯೋಗದ ಸುದ್ದಿ ತಿಳಿದು ಭಿಕ್ಕು ವಜ್ರಪಾದರು ಹಲವುಸಲ ಬಂದಿದ್ದರಂತೆ. ಜೀವನದ ನಶ್ವರತೆಯನ್ನು ಸಾವಿನಷ್ಟು ಸಮರ್ಥವಾಗಿ ತೋರಿಸುವುದು ಯಾವುದೂ ಇಲ್ಲ. ಬುದ್ಧಭಗವಾನರು ಈ ಮೂಲ ಸತ್ಯವನ್ನು ಕಂಡುಹಿಡಿದರು. ಧರ್ಮಕ್ಕೆ ಶರಣಾಗುವುದೊಂದೇ ದುಃಖ ನಿವಾರಣೆಯ ಮಾರ್ಗ. ನೀವು ಭಿಕ್ಕುವಾಗಬೇಕಿಲ್ಲ. ಅಂತರಂಗವನ್ನು ಧರ್ಮಕ್ಕೆ ಒಪ್ಪಿಸಿಕೊಳ್ಳಿ, ಎಂದು ಬಹಳವಾಗಿ ಹೇಳಿದ್ದಾರೆ. ಭಗವಾನರು ಮಗುವನ್ನು ಕಳೆದುಕೊಂಡ ತಾಯಿಗೆ ಸಾವಿಲ್ಲದ ಮನೆಯಿಂದ ಸಾಸಿವೆ ತರಲು ಹೇಳಿದ ಕಥೆಯನ್ನು ಹೇಳಿದ್ದಾರೆ. ಹಿಂದೆ ಎಷ್ಟೋ ಸಂದರ್ಭಗಳಲ್ಲಿ ಕೇಳಿದ್ದ ಕಥೆಯಾದರೂ ಈಗ ಅದು ಜಯಸಿಂಹರಿಗೆ ಸಮಾಧಾನ ಕೊಟ್ಟಿದೆ. 'ಸಂನ್ಯಾಸದ ಪಾರಮ್ಯವನ್ನು ಪ್ರತಿಪಾದಿಸುವ ಜೀವಬ್ರಹ್ಮೈಕ್ಯವಾದ, ಅದರ ಸೂಕ್ಷ್ಮಗಳನ್ನೆಲ್ಲ ವಿವರವಾಗಿ ಹೇಳುತ್ತೀರಾ? ಎಂದರು. ಎಂಟು ದಿನದ ದಾರಿ ಕಳೆಯಲು ನಮಗೆ ಏನೇನಾದರೂ ವಿಷಯಗಳೂ ಬೇಕಿದ್ದವು. ನಾನು ಅರ್ಥಮಾಡಿಕೊಂಡಿದ್ದಂತೆ ಹೇಳತೊಡಗಿದೆ. ಅವಿದ್ಯೆ ಮತ್ತು ಮಾಯೆಗಳೆಂಬ ಎರಡು ಮುಖಗಳು, ಸಗುಣ ಬ್ರಹ್ಮ, ನಿರ್ಗುಣ ಬ್ರಹ್ಮ, ಪ್ರಾತಿಭಾಸಿಕ, ವ್ಯಾವಹಾರಿಕ, ಪಾರಮಾರ್ಥಿಕ ಸತ್ಯಗಳು, ಜೀವಸಾಕ್ಷಿ  ಈಶ್ವರಸಾಕ್ಷಿಗಳು, ಸತ್ಯಮಿಥ್ಯೆಗಳ ಸ್ತರಗಳು, ಮೊದಲಾದ ವಿವರಗಳನ್ನೆಲ್ಲ ಹೇಳುವಾಗ ನನ್ನ ನೆನಪೂ ಸ್ಪಷ್ಟವಾಗತೊಡಗಿತು. </p>

<p> ‘ಆ ಯತಿಯು ಬುದ್ಧಿವಂತನೇ ಇರಬೇಕು.’ ಎಂದರು. </p>

<p> ‘ಅದರಲ್ಲಿ ಸಂಶಯವಿಲ್ಲ.’ </p>

<p> ‘ಆದರೆ ಸಂನ್ಯಾಸವೇ ಪರಮಾಶ್ರಮವೆಂದು ಒಪ್ಪಬೇಕು.’ </p>

<p> ‘ಆತನ ತರ್ಕವನ್ನು ಒಪ್ಪಿಕೊಂಡರೆ.’ </p>

<p> ‘ಒಪ್ಪಿಕೊಳ್ಳುವಷ್ಟು ಕೌಶಲಪೂರ್ಣವಾಗಿದೆಯಲ್ಲ!’ </p>

<p> ‘ಪರಮಾದರ್ಶವಾದದ್ದು ಎಲ್ಲರಿಗೂ ಅನ್ವಯವಾಗಬೇಕು. ಎಲ್ಲರೂ ಸಂನ್ಯಾಸಿಯಾದರೆ ಪ್ರಪಂಚದ ಗತಿ? ಎಂದು ಭಾರತೀದೇವಿಯವರು ಕೇಳಿದ್ದಕ್ಕೆ ಜಗತ್ತಿನ ಸಂಸಾರ ಭಗವತ್ಸಂಕಲ್ಪದಂತೆ ಅನಂತಕಾಲ ನಡೆಯುತ್ತಿರುತ್ತದೆ. ಅದರ ಗತಿಯ ಬಗ್ಗೆ ಯಾರೂ ಚಿಂತಿಸಬೇಕಾಗಿಲ್ಲ ಎಂದುತ್ತರ ಕೊಟ್ಟರು,’ ಎಂದೆ. </p>

<p> ಜಯಸಿಂಹರು ರಥದ ಚಲನೆಯ ಕುಲುಕಿನಲ್ಲಿ ಆಲೋಚಿಸುತ್ತಾ ಕುಳಿತರು. ಅನಂತರ ಪರಕಾಯಪ್ರವೇಶ ಮೊದಲಾದ ಯೋಗ ಮತ್ತು ತಂತ್ರವಿದ್ಯೆಗಳ ಬಗೆಗೆ ಮಾತನಾಡತೊಡಗಿದರು. ಅಮರುಕ ರಾಜನ ಶರೀರವನ್ನು ಶಂಕರಯತಿಯು ಪ್ರವೇಶಿಸಿರಬಹುದಾದ ಸಂಗತಿಯನ್ನು ಕೇಳಿದ ನಂತರ, ‘ಇಂಥ ಶಕ್ತಿ ಇದ್ದರೆ ಯುದ್ಧಗಳನ್ನೇ ಗೆಲ್ಲಬಹುದು, ರಾಜ್ಯಗಳನ್ನೇ ಗೆಲ್ಲಬಹುದು ಅಲ್ಲವೆ?’ ಎಂದರು. </p>

<p> ಮಥುರೆಯನ್ನು ತಲುಪುವ ಹೊತ್ತಿಗೆ ಜಯಸಿಂಹರಿಗೆ ಒಂದು ದೊಡ್ಡ ಸಮಸ್ಯೆ ಕಾದಿತ್ತು. ಐದು ದೊಡ್ಡ ಸಾರ್ಥಗಳು ಮಥರೆಯಲ್ಲಿ ಬೀಡುಬಿಟ್ಟಿದ್ದವು. ಅಧಿಕಾರಿಗಳು ಸಾರ್ಥಗಳಿಂದ ಸುಂಕ ಕೇಳಿದ್ದರು. ಆದರೆ ಸಾರ್ಥಗಳ ನಿವೇದನೆ ಬೇರೆ ತೆರನಾಗಿತ್ತು. ಅವರೆಲ್ಲರೂ ಮಥುರೆಯ ಮೂಲಕವೇ ಸುಂಕ ಕೊಟ್ಟು ವಾಯವ್ಯದ ಕಡೆಗೆ ಹೋಗಿದ್ದರು. ಕಳೆದ ಕೆಲವು ವರ್ಷಗಳಿಂದ ಭಾರತೀಯ ಸಾರ್ಥಗಳು ಗಾಂಧಾರ, ಪಾರಸಿಕ, ರೋಮಕ ಮೊದಲಾದ ವಾಯವ್ಯ ದೂರದೇಶಗಳಿಗೆ ಹೋಗಲು ಅರಬರು ಬಿಡುತ್ತಿರಲಿಲ್ಲ. ಏನಿದ್ದರೂ ನಿಮ್ಮ ಎಲ್ಲ ಪದಾರ್ಥಗಳನ್ನು ನಮಗೆ ಮಾರಿ, ಮುಂದಿನ ವ್ಯಾಪಾರ ನಮ್ಮದು ಎನ್ನುತ್ತಿದ್ದರು. ಆ ಸರಹದ್ದಿನ ಪ್ರಾಂತ್ಯಗಳನ್ನೆಲ್ಲ ಒಂದೊಂದಾಗಿ ಯುದ್ಧದಲ್ಲಿ ವಶಪಡಿಸಿಕೊಂಡು ಅಲ್ಲಿಯ ಜನಗಳನ್ನೆಲ್ಲ ಕತ್ತಿಯ ಭಯವೊಡ್ಡಿ ತಮ್ಮ ಧರ್ಮಕ್ಕೆ ಪರಿವರ್ತಿಸಿ ಅವರ ನಿಷ್ಠೆ ತಮ್ಮ ಕಡೆಗಿರುವಂತೆ ಬೆಸೆದುಕೊಳ್ಳುತ್ತಿದ್ದರು. ವಾಯವ್ಯದ ಕಡೆಗೆ ಮುಖ್ಯ ಮಾರ್ಗವಾಗಿದ್ದ ಮೂಲಸ್ಥಾನವು ಈಗ ಅರಬ್ ಮ್ಲೇಚ್ಛರ ವಶವಾಗಿದೆ. ಇದುವರೆಗೆ ಆ ನಗರದ ವ್ಯಾಪಾರವೆಲ್ಲ ಸ್ಥಳೀಯ ವೈದಿಕ ಹಾಗೂ ಬೌದ್ಧಧರ್ಮದ ವರ್ತಕರ ಕೈಲಿತ್ತು. ಈಗ ಮ್ಲೇಚ್ಛರು ಅವರನ್ನೆಲ್ಲ ತಮ್ಮ ಧರ್ಮಕ್ಕೆ ಪರಿವರ್ತಿಸುತ್ತಿದ್ದಾರೆ. ಮತಾಂತರವಾಗದಿದ್ದರೆ ಅವರಿಗೆ ವಾಣಿಜ್ಯದ ಅನುಮತಿಯನ್ನೇ ಕೊಡುವುದಿಲ್ಲ. ಅದಲ್ಲದೆ ಅರಬ್ ವ್ಯಾಪಾರಗಳ ತಂಡಗಳೇ ಅಲ್ಲಿಗೆ ಬಂದು ಬೀಡುಬಿಟ್ಟವೆ. ಅವರು ಕೇಳಿದ್ದೇ ಧಾರಣೆ. ತಮ್ಮ ಮೌಲ್ಯ, ಸಾಗಣೆಯ ವೆಚ್ಚ, ಇತ್ಯಾದಿ ಯಾವ ಲೆಕ್ಕ ಹೇಳಿದರೂ ಕೇಳುವುದಿಲ್ಲ. ಹೀಗಾಗಿ ಈ ಐದು ಸಾರ್ಥಗಳೂ ಮಾತನಾಡಿಕೊಂಡು ಸರಕುಗಳನ್ನು ಮಾರದೆ ಹಿಂತಿರುಗಿ ತಂದಿವೆ. ಬಲುದೊಡ್ಡ ನಷ್ಟವನ್ನನುಭವಿಸಿರುವ ಈ ಸರಕುಗಳಿಗೆ ಮಥುರೆಯ ಅಧಿಕಾರಿಗಳು ಮತ್ತೊಮ್ಮೆ ಸುಂಕ ಕೇಳುತ್ತಿದ್ದಾರೆ. ಪದಾರ್ಥಗಳನ್ನೆಲ್ಲ ಯಮುನಾ ನದಿಯಲ್ಲಿ ಸುರಿದು ಹೋಗಬೇಕೆನ್ನಿಸುವಷ್ಟು ರೋಸಿಹೋಗಿ ಅವರು ಪ್ರಾಂತ್ಯ ಪ್ರತಿನಿಧಿಯಾದ ಜಯಸಿಂಹರನ್ನೇ ಕಾಣಲು ಕಾದಿದ್ದಾರೆ. ಪ್ರತಿಯೊಂದು ಸಾರ್ಥದ ಸಾರ್ಥವಾಹ ಮತ್ತು ಸಾರ್ಥನಿರ್ಯಾಮಕರಂತೆ ಒಟ್ಟು ಹತ್ತು ಜನರು ಹಾದಿ ಕಾಯುತ್ತಿದ್ದಾರೆ. ಮಾಹಿಷ್ಮತಿಯ ಆಯಾಸಕರ ಪ್ರಯಾಣದಿಂದ ಬಂದ ತಕ್ಷಣ ಜಯಸಿಂಹರು ಅವರಿಗೆ ಹೇಳಿ ಕಳಿಸಿದರು. ಜಯಸಿಂಹರ ಪ್ರಾಸಾದದ ಹೊರವಲಯದ ಪ್ರತೀಕ್ಷಾ ಕೋಣೆಯಲ್ಲಿದ್ದ ಆ ಹತ್ತೂ ಜನರ ಮೇಲೆ ನಾನು ಕಣ್ಣಾಡಿಸಿದೆ. ಅವರಲ್ಲಿ ಇಬ್ಬರನ್ನು, ಎಲ್ಲಿಯೋ ನೋಡಿದ್ದ ನೆನಪು ಬಂತು. ಒಂದು ನಿಮಿಷದಲ್ಲಿ ಗುರುತು ಹತ್ತಿತು. ತಾರಾವತಿಯಿಂದ ನನ್ನನ್ನು ಜೊತೆಯಲ್ಲಿ ಕರೆದು ತಂದ ಸಾರ್ಥದ ಮುಖ್ಯವಾಹ ಬುಧಶ್ರೇಷ್ಠಿ ಮತ್ತು ನಿರ್ಯಾಮಕ ಆದಿತ್ಯಗುಪ್ತರು. ಅವರೂ ನನ್ನ ಹೆಸರು ಹೇಳುವ ಮಟ್ಟಿಗೆ ಗುರುತು ಹಿಡಿದರು. ಬುಧಶ್ರೇಷ್ಠಿಗಳು, ‘ಪಂಡಿತ ನಾಗಭಟ್ಟರೆ, ಕಾಶಿಯಲ್ಲಿ ಎಷ್ಟು ವರ್ಷಗಳಿದ್ದಿರಿ? ಯಾವ ವೇದಾಂಗವನ್ನು ಕರಗತಮಾಡಿಕೊಂಡಿರಿ?’ ಎಂದು ಕೇಳಿದರು. </p>

<p> ಆರುವರ್ಷ. ಹೊಸದಾಗಿ ಬಂದಿರುವ ಜೀವಬ್ರಹ್ಮೈಕ್ಯವಾದವನ್ನು ಅಧ್ಯಯನಮಾಡಿದೆ ಎಂದು ಉತ್ತರಿಸಿದ ನಂತರ ನಾನು ಅವರ ಯೋಗಕ್ಷೇಮ ವಿಚಾರಿಸಿದೆ. ವಾಣಿಜ್ಯವನ್ನು ಕೈಬಿಡುವುದೇ ಲೇಸೆಂಬ ಮಾತನಾಡಿದರು. ಅವರಿಗೂ ಮುಪ್ಪು ತೊಡಗಿತ್ತು. ಇದೇ ಕೊನೆಯ ಸಂಚಾರ, ಇನ್ನು ಸಾರ್ಥ ಹೊರಡುವುದಿಲ್ಲ. ಭರತಖಂಡದೊಳಗೆ ನಡೆಸುವ ಸಾರ್ಥದಲ್ಲಿ ಹೆಚ್ಚು ಲಾಭವಿರುವುದಿಲ್ಲ. ಖಂಡೋತ್ತರ

ವಾಣಿಜ್ಯಕ್ಕೆ ಮ್ಲೇಚ್ಛರು ತಡೆಹಾಕಿದ್ದಾರೆ, ಎಂದರು. ಅನಂತರ ಜಯಸಿಂಹರು ಅವರನ್ನೆಲ್ಲ ಒಳಗೆ ಕರೆಸಿದರು. ನಾನು ಇದ್ದುದನ್ನು ತಿಳಿದು ನನ್ನನ್ನೂ ಕರೆದರು. 'ನೀವೂ ಇರಿ. ಇದರಲ್ಲಿ ರಾಜ್ಯರಹಸ್ಯದ ಸಂಗತಿ ಏನೂ ಇಲ್ಲ,' ಎಂದು ಜಯಸಿಂಹರೇ ನನಗೆ ಹೇಳಿದರು. </p>
<p> ಅವರಿಬ್ಬರೂ ನನ್ನನ್ನು ದುರುಗುಟ್ಟಿಕೊಂಡು ನೋಡಿದರು. ಅನಂತರ ಒಬ್ಬರು ಇನ್ನೊಬ್ಬರ ಮುಖವನ್ನು ನೋಡಿಕೊಂಡರು. ಶುದ್ಧ ಅರಬೀ ಭಾಷೆಯಲ್ಲಿ ಮಾತನಾಡಿಕೊಂಡರು. ಅನಂತರ ಪೈಶಾಚಿಯಲ್ಲಿ ನನಗೆ ಹೇಳಿದರು: 'ನಾಳೆ ಮತ್ತೆ ತನಿಖೆಯಾಗುತ್ತೆ. ಇನ್ನೂ ಹೆಚ್ಚಿನ ಶಿಕ್ಷೆ ಕಾದಿದೆ. ಯೋಚನೆ ಮಾಡಿರು.' </p>
<p> ಹಿಂಸಕನು ಹೊರಗೆ ಹೋಗಿ ಇಬ್ಬರು ಭಟರನ್ನು ಕರೆತಂದ. ನನ್ನ ಕೈಗಳಿಗೆ ಸರಪಣಿ ತೊಡಿಸಿ ಅವರು ಕಂಕುಳುಗಳಿಗೆ ಕೈ ಹಾಕಿ ಎತ್ತಿ ನಡೆಸಿಕೊಂಡು ಸೊಳ್ಳೆ ನೊಣಗಳು ಸುಟ್ಟ ಮತ್ತು ದಬ್ಬಳದಲ್ಲಿ ಚುಚ್ಚಿದ, ಚಾವಟಿ ಏಟುಗಳಿಂದ ಊದಿಕೊಂಡ ಭಾಗಗಳಿಗೆ ಲಗ್ಗೆ ಇಟ್ಟವು. </p>
<p> ರಾತ್ರಿ ಅನ್ನ ತೋವೆಗಳನ್ನು ಕೊಟ್ಟು ತಿನ್ನಲು ಅನುಕೂಲವಾಗುವಂತೆ ಕೈಗಳ ಸರಪಣಿಯನ್ನು ಬಿಚ್ಚಿದರು. ಸೊಳ್ಳೆಗಳು ಹೋಗುವಂತೆ ಕೋಣೆಯೊಳಗೆ ಬೇವಿನ ಚಕ್ಕೆಯ ಹೊಗೆ ಹಾಕಿದರು. ಬೆನ್ನು ಅಂಡುಗಳಲ್ಲಿ ಚಾಟಿಯ ಬಾವು ಊದಿದ್ದುದರಿಂದ ಅಂಗಾತ ಮಲಗುವಂತಿರಲಿಲ್ಲ. ಕೈಯಿನ ಸುಟ್ಟ ಗಾಯಕ್ಕೆ ಏನೂ ತಗುಲದಂತೆ ಎಚ್ಚರ ವಹಿಸಿ ಮಗ್ಗುಲಾಗಿ ಮಲಗಿಯೇ ತಕ್ಕಮಟ್ಟಿಗೆ ನಿದ್ದೆ ಮಾಡಿದೆ. ಬೆಳಗ್ಗೆ ಬಹಿರ್‌ಪ್ರದೇಶಕ್ಕೆ ಕರೆದೊಯ್ದಾಗ ಸರಪಳಿಯನ್ನು ಬಿಚ್ಚಿದ್ದರು. ಸ್ನಾನ ಮಾಡಲು ನೀರುಕೊಟ್ಟರು. ನಾಲ್ಕನೆಯ ಪ್ರಹರದ ವೇಳೆಗೆ ಒಂದು ಸಾವೆಯಲ್ಲಿ ಅನ್ನ ತೋವೆಗಳನ್ನು ಕೊಟ್ಟರು. ಅದನ್ನು ತಿಂದು ನೀರು ಕುಡಿದಾದ ಮೇಲೆ ತನಿಖೆಗೆ ನಡಿ, ಎಂದು ಇಬ್ಬರು ಭಟರು ಹಿಂದಿನ ದಿನ ತನಿಖೆ ಮಾಡಿದ ಕೋಣೆಗೆ ಕರೆದೊಯ್ದರು. ಈ ದಿನ ಬಲಗೈಗೆ ಬರೆ ಎಳೆಯುತ್ತಾರೆ. ಮೂತ್ರದ್ವಾರಕ್ಕೆ ದಬ್ಬಳ ಚುಚ್ಚುತ್ತಾರೆ, ಎಂಬ ಊಹೆಯಲ್ಲಿ ನಾನು ಹೆಜ್ಜೆ ಹಾಕಿದೆ. ನೆನ್ನೆ ರಾತ್ರಿ ಹೊಟ್ಟೆಗೆ ಆಹಾರ ಬಿದ್ದಿತ್ತು. ಬೆಳಗಿನ ಸ್ನಾನ ಊಟಗಳಾಗಿದ್ದವು. ರಾತ್ರಿ ತುಸು ನಿದ್ದೆಯಾಗಿತ್ತು. ಇವತ್ತು ಪದೇ ಪದೇ ಜ್ಞಾನತಪ್ಪುವುದಿಲ್ಲವೆಂಬ ವಿಶ್ವಾಸ ಮೂಡಿತ್ತು. ತಪ್ಪಿದರೆ ಪ್ರಕೃತಿಸಹಜ ಅಷ್ಟೆ, ಎಂಬ ಸಮಾಧಾನದಿಂದ ಹೆಜ್ಜೆ ಹಾಕಿದೆ. ಕೋಣೆಯೊಳಗೆ ಒಬ್ಬನೇ ತನಿಖಾಧಿಕಾರಿ ಇದ್ದ. ಅವನ ಎದುರಿಗೆ ಹಿಂಸೆಯ ಎಲ್ಲ ಉಪಕರಣಗಳೂ ಇದ್ದರೂ ಮೂಲೆಯ ಅಗ್ಗಿಷ್ಟಿಕೆಯಲ್ಲಿ ಬೆಂಕಿ ಇರಲಿಲ್ಲ. ಅವನ ಮುಖದಲ್ಲಿ ನೆನ್ನೆ ಇದ್ದಂತಹ ಕ್ರೌರ್ಯ ಕಾಣಲಿಲ್ಲ. ತುಸು ದಯೆ, ತುಸು ಅನುಗ್ರಹಭಾವಗಳಿದ್ದವು. 'ಇವನ ಸರಪಣಿಗಳನ್ನು ಬಿಚ್ಚು,' ಎಂದು ಒಬ್ಬ ಭಟನಿಗೆ ಆಜ್ಞಾಪಿಸಿದ. ಅವುಗಳನ್ನು ಕಳಚಿದ ನಂತರ, 'ನೀವು ಬಾಗಿಲು ಮುಚ್ಚಿ ಹೊರಭಾಗದಲ್ಲಿರಿ,' ಎಂದ. ಭಟರಿಬ್ಬರೂ ಹೋದರು. ದಪ್ಪ ಬಾಗಿಲು ಮುಚ್ಚಿದ ಸದ್ದು ಕೇಳಿಸಿತು. 'ಕೂತುಕೊ. ಕುಳಿತೇ ಮಾತನಾಡು,' ನನಗೆ ಹೇಳಿದ. ಧ್ವನಿಯಲ್ಲಿ ಕನಿಕರವಿತ್ತು. </p>
<p> 'ಕ್ಷಮಾಪಣೆ ಕೇಳುವುದು. ಪಶ್ಚಾತ್ತಾಪದ ಗುರುತಾಗಿ ನಮ್ಮ ಮತಕ್ಕೆ ಸೇರುವುದು. ಸಂಪೂರ್ಣ ಕ್ಷಮೆ ಸಿಕ್ಕದಿರಬಹುದು. ಆದರೆ ಮರಣದಂಡನೆ ತಪ್ಪುತ್ತದೆ. ಒಂದೆರಡು ವರ್ಷ ನಿನ್ನ ವರ್ತನೆಯನ್ನು ಗಮನಿಸಿದ ನಂತರ ಉಳಿದ ಶಿಕ್ಷೆಯೂ ವಜಾ ಆಗುತ್ತದೆ. ಸುಲಭವಾಗಿ ಜೀವನ ಮಾಡುವಂಥ ಒಂದು ಹುದ್ದೆಯೂ ಸಿಕ್ಕುತ್ತದೆ. ನೀನು ನಮ್ಮವನಾಗುತ್ತೀಯೆ,' ಎಂದು ಅವನು ಆಹ್ವಾನಪೂರ್ವಕ ಮುಗುಳ್ನಕ್ಕ. </p>
<p> 'ಮತಪರಿವರ್ತನೆಯೆ? ಕ್ಷುಲ್ಲಕ ಕಾರಣಕ್ಕಾಗಿ?' </p>
<p> 'ಜೀವ ಉಳಿಯುವುದು ಕ್ಷುಲ್ಲಕವೆ?' </p>
<p> 'ಜೀವ ಉಳಿಯುತ್ತದೋ ಅಳಿಯುತ್ತದೋ ಎಂಬುದು ದೊಡ್ಡ ತತ್ತ್ವಜಿಜ್ಞಾಸೆಯ ವಿಷಯ. ನಮ್ಮಲ್ಲೂ ಮತಪರಿವರ್ತನೆಯುಂಟು. ಇಬ್ಬರು ಜಿಜ್ಞಾಸುಗಳು ಪರಸ್ಪರ ವಾಗ್ವಾದಕ್ಕೆ ಕೂತು ದಿನಗಟ್ಟಳೆ ಜಿಜ್ಞಾಸೆಮಾಡುತ್ತಾರೆ. ಸೋತವನು ಗೆದ್ದವನ ಮತವನ್ನು ಸ್ವೀಕರಿಸುವುದು ನಿಬಂಧನೆ. ನಿಮ್ಮ ಮತವನ್ನು ಚನ್ನಾಗಿ ತಿಳಿದ ಒಬ್ಬ ವಿದ್ವಾಂಸನನ್ನು ನನ್ನೊಡನೆ ಸಹಸ್ರ ಸಾರ್ವಜನಿಕರೆದುರು ವಾದಕ್ಕೆ ಕೂರಿಸಿ. ತರ್ಕಬದ್ಧವಾಗಿ ಇಬ್ಬರೂ ವಾದಮಾಡಬೇಕು. ಸೋತರೆ ನಾನು ನಿಮ್ಮ ಮತಕ್ಕೆ ಸೇರುತೀನಿ. ಗೆದ್ದರೆ ಅವನು ನನ್ನ ಮತಾನುಯಾಯಿಯಾಗಬೇಕು.' </p>
<p> 'ಧರ್ಮವನ್ನು ಪಣವಾಗಿಟ್ಟು ಚರ್ಚಿಸುವುದೆ?' ಆತ ಹುಬ್ಬೇರಿಸಿದ. </p>

<p> ‘ನಮ್ಮಲ್ಲಿ ಎಲ್ಲೆಲ್ಲೂ ಹೀಗೆ ಮಾಡುತೀವಿ. ಅದಕ್ಕಾಗಿ ವಿದ್ವಾಂಸರು ಊರೂರು ಅಲೆಯುತ್ತಾರೆ. ವಾದಭಿಕ್ಷೆಯನ್ನು ಇಲ್ಲವೆನ್ನುವುದು ಮಹಾ ಅಪಮಾನ.’ </p>

<p> ‘ನಾವು ಧರ್ಮವನ್ನು ವಾದಕ್ಕೆ ಒಳಪಡಿಸುವುದಿಲ್ಲ.’ </p>

<p> ‘ಕತ್ತಿಗೆ ಒಳಪಡಿಸುತ್ತೀರಂತೆ ನಿಜವೆ?’ </p>

<p> ‘ನಿಸ್ಸಂದೇಹವಾಗಿ. ಆಗಲಿ. ನಿಮ್ಮಲ್ಲಿ ಎಷ್ಟು ಮತಗಳಿವೆ?’ </p>

<p> ‘ಇಷ್ಟೇ ಎಂದು ಹೇಗೆ ಹೇಳಲಿ? ಒಂದೊಂದು ಮತಗಳೊಳಗೆ ಶಾಖೋಪಶಾಖೆಗಳು. ಪ್ರಧಾನವಾದ ವೈದಿಕರಲ್ಲಿ ಪೂರ್ವಮೀಮಾಂಸಕರು, ಉತ್ತರ ಮೀಮಾಂಸಕರು, ನೈಯಿಕರು, ವೈಶೇಷಿಕರು, ಸಾಂಖ್ಯರು, ಯೋಗಿಗಳು, ಬೌದ್ಧರಲ್ಲಿ ಹೀನಯಾನಿಗಳು, ಮಹಾಯಾನಿಗಳು, ಹೀನಯಾನಿಗಳಲ್ಲಿ ವೈಭಾಷಿಕರು ಸೌತ್ರಾಂತಿಕರು, ಮಹಾಯಾನಿಗಳಲ್ಲಿ ಯೋಗಾಚಾರದವರು, ಮಾಧ್ಯಮಿಕರು, ಜೈನರಲ್ಲಿ ದಿಗಂಬರರು, ಶ್ವೇತಾಂಬರರು, ಅವರಲ್ಲದೆ ತಾಂತ್ರಿಕರು, ಪಾಶುಪತರು...’ ಎನ್ನುವಲ್ಲಿ ಆತನ ಮುಖದಲ್ಲಿ ಗೊಂದಲಹುಟ್ಟಿತು. </p>

<p> ‘ಹಾಗಾದರೆ ನಿಮ್ಮದು ಒಂದು ದೇಶವಲ್ಲ.’ ಎಂದ. </p>

<p> ‘ಯಾಕೆ?’ </p>

<p> ‘ಇಷ್ಟೊಂದು ಮತಗಳಿಗೆ ಯಾವ ರಾಜನು ಅವಕಾಶ ಕೊಡುತ್ತಾನೆ?’ </p>

<p> ‘ನಮ್ಮಲ್ಲಿ ಎಲ್ಲ ರಾಜರೂ ಎಲ್ಲ ಮತಗಳಿಗೂ ಅವಕಾಶ ಕೊಡುತ್ತಾರೆ. ಮತವು ಅವರವರ ಇಚ್ಛೆಗೆ ಬಿಟ್ಟದ್ದು. ಮತಿ ಎಂದರೆ ಬುದ್ಧಿ. ಬುದ್ಧಿಯ ಗ್ರಹಿಕೆಯೇ ಮತ. ಪ್ರಪಂಚದಲ್ಲಿ ಎಷ್ಟು ಜನರಿದ್ದಾರೋ ಅಷ್ಟು ಬುದ್ಧಿಗಳಿವೆ. ಅಷ್ಟು ಗ್ರಹಿಕೆಗಳಿವೆ. ಅಷ್ಟು ಮತಗಳಿರುತ್ತವೆ.’ </p>

</body></text>
</Doc>